ಹೂಡಿ ಗ್ರಾಮದಲ್ಲಿ ಸಾಧಾರಣ ನೂರು ಎಕರೆ ಭೂಮಿಯನ್ನು ಮುಂಚಿತವಾಗಿ ಅಲ್ಲಿ ಇದ್ದ ಪರಿಶಿಷ್ಟ ಜಾತಿ ಜನಾಂಗದವರು ಸಾಗುವಳಿ ಮಾಡುತ್ತಿದ್ದರು. ಹರಿಜನ-ಗಿರಿಜನರು ಈ ಭೂಮಿಯನ್ನು ಸಾಗುವಳಿ ಮಾಡುತ್ತಿದ್ದರು, ನ್ಯಾಯ ಬದ್ಧವಾಗಿ, ಬಗರ್‌ಹುಕುಂ ಸಾಗುವಳಿ ಕಾಯ್ದೆ ಪ್ರಕಾರ ಆ ಜಮೀನು ಆ ಬಡ ಹರಿಜನರಿಗೆ ಗಿರಿಜನರಿಗೆ ಹೋಗಬೇಕಾಗಿತ್ತು. ಆದರೆ ಬಗರ್‌ಹುಕುಂ ಸಾಗುವಳಿ ಕಾಯ್ದೆಯಲ್ಲಿ ಒಂದು ಪ್ರಾವಿಷನ್ ಮಾಡಿದ್ದಾರೆ. ಏನು ಪ್ರಾವಿಷನ್ ಮಾಡಿದ್ದಾರೆಂದರೆ, ಸಿಟಿ ಲಿಮಿಟ್ಸ್‌ನಿಂದ ಹತ್ತನೆಯ ಕಿಲೋಮೀಟರ್ ಒಳಗಾಗಿ ಆ ಭೂಮಿ ಇದ್ದರೆ ಅದನ್ನು ಕೊಡುವುದಕ್ಕೆ ಬರುವುದಿಲ್ಲ. ಇದು ವಿಲೇಜ್ ಲಿಮಿಟ್ಸ್‌ಗೆ ಸಂಬಂಧಪಟ್ಟಿಲ್ಲ. ಹುಬ್ಬಳ್ಳಿ ಇರಬಹುದು, ಬೆಳಗಾಂ ಇರಬಹುದು, ಬೆಂಗಳೂರು ಇರಬಹುದು, ಹಾಗಾಗಿ ಮಾನ್ಯ ಸಚಿವ ಕೃಷ್ಣಪ್ಪನವರು ಏನು ಮಾಡಿದರು ಎಂದರೆ ತನ್ನ ದುರಾಸೆಯಿಂದ ಈ ಭೂಮಿ ತನ್ನ ಆಪ್ತರಿಗೆ, ಸ್ನೇಹಿತರಿಗೆ ಕೊಡಬೇಕು, ಸಾಕಷ್ಟು ಹಣ ಮಾಡಬೇಕು, ಎಂದು ಆ ಪರಿಶಿಷ್ಟ ಜಾತಿ ಜನಾಂಗದವರನ್ನು ಅಲ್ಲಿಂದ ಎವಿಕ್ಟ್ ಮಾಡಿಸಿದರು. ರೆವಿನ್ಯೂ ಮಿನಿಸ್ಟರ್ ಅವರೂ ಕೂಡ ಅಲ್ಲಿ ವಿಸಿಟ್ ಕೊಟ್ಟಿದ್ದಾರೆ. ರೆವಿನ್ಯೂ ಮಿನಿಸ್ಟರ್‌ಗೆ ಎಲ್ಲಾ ಸತ್ಯಸಂಗತಿ ಗೊತ್ತಿದೆ. ಆದರೆ ಅವರು ಏತಕ್ಕೆ ಬಾಯಿ ಮುಚ್ಚಿಕೊಂಡಿದ್ದಾರೋ ನನಗೆ ಗೊತ್ತಿಲ್ಲ. ನಾನು ಎರಡು ಮೂರು ಸಾರಿ ಇಲ್ಲಿ ಈ ವಿಚಾರವನ್ನು ರೈಸ್ ಮಾಡಿದ್ದೇನೆ. ಸಾಮಾನ್ಯ ಜನ, ಬಡಜನರು, ಕಡು-ಬಡವರು, ಪರಿಶಿಷ್ಟ ಜಾತಿ ಜನಾಂಗ ತಮಗೆ ಹೇಳಿದರು, ಮನವಿ ಕೊಟ್ಟರು, ಅದನ್ನು ಓದುವುದಕ್ಕೆ ತಮಗೆ ಆಗಲಿಲ್ಲವೋ? ನಿಮಗೆ ಕಣ್ಣಿರಲಿಲ್ಲವೋ? ಅಥವಾ ಕೇಳಲಿಕ್ಕೆ ಆಗಲಿಲ್ಲವೋ ನಿಮಗೆ ಕಿವಿ ಇರಲಿಲ್ಲವೋ? ಅಥವಾ ಅಲ್ಲಿ ದುರ್ವ್ಯವಹಾರ ನಡೆದಿದೆ ಎಂದು ಗೊತ್ತಾಗಿ ತಾವು ಸುಮ್ಮನೆ ಕುಳಿತಿರುವುದು ನೋಡಿದರೆ ತಾವು ಶಾಮೀಲು ಇದ್ದೀರೋ? ಈ ರೀತಿಯ ಆಪಾದನೆಗಳನ್ನು ಮಾಡಿದರೂ ಸಹಿತ ಇನ್ನೂ ರೆವಿನ್ಯೂ ಮಿನಿಸ್ಟರ್ ರವರು ಸುಮ್ಮನೆ ಕುಳಿತಿದ್ದಾರೆ. ಅದರ ನಂತರ ಏನಾಯಿತು? ಈ ಆಶ್ರಯ ಸಮಿತಿಯ ಛೇರ್ಮನ್‌ರು ಕೃಷ್ಣಪ್ಪನವರು ಇದ್ದರು. ಆಶ್ರಯದಲ್ಲಿ ಯಾರಿಗೆ ಸೈಟನ್ನು ಕೊಡಬಹುದು ಎನ್ನುವುದಕ್ಕೆ ಕ್ರೈಟೇರಿಯಾ ಏನಿದೆ? ಮೊದಲನೆಯದು ಅವರು ಸೈಟ್‌ಲೆಸ್ ಇರಬೇಕು, ಎರಡನೆಯದು ಸ್ಥಳೀಯ ಜನರಿಗೆ ಪ್ರೈಯಾರಿಟಿ ಕೊಡಬೇಕು, ಮೂರನೆಯದು ಅವರ ಆದಾಯ ವಾರ್ಷಿಕ ಎಂಟು ಸಾವಿರದನಾಲ್ಕು ನೂರು ರೂಪಾಯಿಗಳ ಒಳಗಾಗಿ ಇರಬೇಕು. ಈ ಮೂರನ್ನು ನೋಡದೆ, ಇದಕ್ಕೆ ಯಾವ ರೀತಿಯ ಗಮನವನ್ನೂ ಕೊಡದೆ ಏನು ಮಾಡಿದರು ಎಂದರೆ 1315 ಸೈಟುಗಳನ್ನು ಇವರು ಹಂಚಿದರು. ನಾನು ಬಹಳ ಸಾರಿ ಮುಖ್ಯಮಂತ್ರಿಗಳ ಗಮನಕ್ಕೆ ಇದನ್ನು ತಂದೆ. ನೀವು ಸ್ವಚ್ಛ ಸರ್ಕಾರ ಕೊಡುತ್ತೇವೆ ಎಂದು ಹೇಳಿದಿರಿ, ಧಕ್ಷ ಸರ್ಕಾರ ಕೊಡುತ್ತೇವೆ ಎಂದು ಹೇಳಿದಿರಿ. ಎಲ್ಲೆಲ್ಲಿ ಅನ್ಯಾಯವಾಗುತ್ತಿದೆ, ಅದನ್ನು ಸರಿಪಡಿಸುತ್ತೇವೆ ಎಂದು ಹೇಳಿದಿರಿ. ಆದರೆ ನೀವು ಇಲ್ಲಿ ಏನು ಮಾಡುತ್ತಿದ್ದೀರಿ ಎಂದು ಕೇಳಿವೆ. ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಟ್ಟರು, ಇಲ್ಲ, ಇಲ್ಲಿ ಯಾವ ತರಹದ ದುರ್ವ್ಯವಹಾರ ಆಗಿಲ್ಲ. ಅವರು ಕಣ್ಣಿಲ್ಲ, ಡೆಫ್ ಡಮ್ ಇಂಥವರಿಗೆ ಸೈಟುಗಳನ್ನು ಕೊಟ್ಟಿದ್ದಾರೆ. ಒಳ್ಳೆಯ ಪವಿತ್ರವಾದ ಕೆಲಸವನ್ನು ಮಾಡಿದ್ದಾರೆ ಎಂದು ಮುಖ್ಯಮಂತ್ರಿಗಳು ಹೇಳಿದರು. ಪರಿಶಿಷ್ಟ ಜಾತಿ ಜನಾಂಗ, ಹಿಂದುಳಿದ ಜನಾಂಗ, ಬಡ ಜನರು ನಮ್ಮ ಪಕ್ಷದ ಅಧ್ಯಕ್ಷರಾದ ಅಶ್ವತ್ಥನಾರಾಯಣರೆಡ್ಡಿಯವರ ನೇತೃತ್ವದಲ್ಲಿ ಕಳೆದ ಮೂರು ತಿಂಗಳಿಂದ ಅಜಿಟೇಷನ್ ಮಾಡುತ್ತಿದ್ದಾರೆ. ಈ ಜನರ ಹೊಡೆಬಡೆ ಆಗಿದೆ. ಮಾನ್ಯ ಕೃಷ್ಣಪ್ಪನವರ ನೇತೃತ್ವದಲ್ಲಿ ಕೆಂಪಯ್ಯ ಡಿಸಿಪಿ, ಡೆಪ್ಯುಟಿ ಕಮಿಷನರ್ ರೂರಲ್ ಹಾಲಪ್ಪನವರು ಇವರು ಇವರ ಕೈಗೊಂಬೆಯಾಗಿದ್ದಾರೆ. ಕೃಷ್ಣಪ್ಪನವರು ಹೇಳಬೇಕು, ಆ ಪ್ರಕಾರ ಅವರು ಕುಣಿಯಬೇಕು. ಅಲ್ಲಿ ಹೋಗಿ ಅಲ್ಲಿದ್ದ ಬಡಜನರಿಗೆ ಹೊಡೆಬಡೆ ಮಾಡಿದ್ದಾರೆ. ಲಾಟಿಛಾರ್ಜ್ ಮಾಡಿದ್ದಾರೆ. ಅವರು ಗುಡಿಸಲು ಕಟ್ಟಿಕೊಂಡಿದ್ದರು, ಅದೆಲ್ಲಾ ಡ್ಯಾಮೇಜ್ ಮಾಡಿದ್ದಾರೆ. ಇದು ಒಂದು ಕಡೆಯಾದರೆ, ಪುನಃ ನಮಗೆ ಅನ್ಯಾಯ ಮಾಡಿದ್ದಾರೆ ಎಂದು ಪೋಲೀಸ್ ಸ್ಟೇಷನ್ ಮುಂದೆ ಮೊನ್ನೆ ಮೊನ್ನೆ ನಾಲ್ಕಾರು ದಿವಸದ ಹಿಂದೆ ಹೇಳಿದಾಗ ಆಗಲೂ ಸಹಾ ಪೋಲೀಸ್‌ನವರು ಲಾಠಿಛಾರ್ಜ್ ಮಾಡಿದರು.

ಇವತ್ತು ಪುನಃ ಕೃಷ್ಣದಲ್ಲಿ ಆ ಜನ ಅಜಿಟೇಷನ್ ಮಾಡುತ್ತಿದ್ದಾರೆಂದು ಕಾಣುತ್ತದೆ. ಮಾನ್ಯ ಮುಖ್ಯಮಂತ್ರಿಯವರ ಕಛೇರಿಗೆ ಬಂದು ಆ ಜನರು ಇವತ್ತು ಪುನಃ ಅಜಿಟೇಷನ್ ಮಾಡುತ್ತಿದ್ದಾರೆ. ನಾನು ಕೇಳುತ್ತೇನೆ, ಪ್ರಜಾಪ್ರಭುತ್ವ ಇದೆ ಎಂದು ಹೇಳುತ್ತೀರಿ, ಬಡ ಜನರ ಸರ್ಕಾರ ಎಂದು ಹೇಳುತ್ತೀರಿ, ಪರಿಶಿಷ್ಟ ಜಾತಿ ಜನಾಂಗದ ಸರ್ಕಾರ ಎಂದು ಹೇಳುತ್ತೀರಿ, ಹಿಂದುಳಿದ ಜನಾಂಗದವರಿಗೆ ನಾವು ಒಳ್ಳೆಯದು ಮಾಡುತ್ತೀರಿ ಎಂದು ಹೇಳುತ್ತೀರಿ, ಇದು ಹೇಳುವಾಗ ಇಷ್ಟೊಂದು ಅನ್ಯಾಯವಾದಾಗ ತಾವು ಏತಕ್ಕೆ ಕ್ರಮ ತೆಗೆದುಕೊಳ್ಳುತ್ತಿಲ್ಲ? ತಮಗೆ ಏನಾಗಿದೆ? ಮಾನ್ಯ ಸಚಿವರ ವಿರುದ್ಧ ಕ್ರಮ ಕೈಗೊಳ್ಳುವುದಕ್ಕೆ ಮುಖ್ಯಮಂತ್ರಿಗಳಿಗೆ ಶಕ್ತಿ ಇಲ್ಲವೇನು? ಹಾಗಾದರೆ ನಿಮ್ಮ ದಕ್ಷ ಆಡಳಿತ, ಒಳ್ಳೆಯ ಸರ್ಕಾರ, ಬಡವರ ಸರ್ಕಾರ ಎಂದು ಹೇಳಿದ್ದ ಈ ಮಾತು ಎಲ್ಲಿಗೆ ಹೋಯಿತು? ಓಪನ್ ಗವರ್ನಮೆಂಟ್ ಎಂದು ಹೇಳಿದಿರಿ. ಇದೇ ನಿಮ್ಮ ಓಪನ್ ಗವರ್ನಮೆಂಟಾ? ಪುನಃ ನಾನು ಈ ವಿಷಯ ಎತ್ತಿದಾಗ ಮಾನ್ಯ ಮುಖ್ಯಮಂತ್ರಿಗಳಿಗೆ ಹೇಳಿದೆ, ನಿಮಗೆ ಒಳ್ಳೆಯ ಹೆಸರು ಬರುವುದಿಲ್ಲ. ಇದರ ಬಗ್ಗೆ ಒಂದು ವಿಚಾರಣೆ ಮಾಡಿಸಿ ಎಂದು. ಮಾನ್ಯ ಮುಖ್ಯಮಂತ್ರಿಯವರು ಡಿವಿಜನಲ್ ಕಮಿಷನರ್ ಬೆಂಗಳೂರುರವರಾದ ಶ್ರೀಮತಿ ವೀಣಾ ಶ್ರೀರಾಮ್, ಮುಖಾಂತರ ಒಂದು ಆಜ್ಞೆ ಮಾಡಿದರು, ವಿಚಾರಣೆ ಮಾಡಬೇಕು ಎಂದು.

ಶ್ರೀ ಎಂ. ವೀರಪ್ಪ ಮೊಯಿಲಿ : ಹಾಗಾದರೆ ಹಿಂದಿನ ವಿಚಾರ ನಾವು ಬಿಟ್ಟು ಬಿಡಬೇಕು. ತಾವು ಹೇಳುತ್ತಿದ್ದೀರಲ್ಲ, ವಿಚಾರಣೆ ಮಾಡಲಿಲ್ಲ. ಎಲ್ಲಾ ಸರಿಯಾಗಿದೆ ಎಂದು. ಸರಿಯಾಗಿದ್ದರೆ ನಾನು ವಿಚಾರಣೆ ಮಾಡಿ ಎಂದು ಹೇಳುತ್ತಿರಲಿಲ್ಲ. What you have said you are contradicting.

ಶ್ರೀ ಆರ್.ವಿ. ದೇಶಪಾಂಡೆ : ತಾವು ಮುಂಚೆ ಬಂದಿಲ್ಲ.

Sri. M. Veerappa Moily : What you have said just now and earlier, ಈ ವಾಕ್ಯದಲ್ಲಿ ಅದನ್ನು .... ಇವೇಡ್ ಮಾಡುತ್ತಾ ಇದ್ದೀರಿ. I am just telling you.

ಶ್ರೀ ಆರ್.ವಿ. ದೇಶಪಾಂಡೆ : ನಾನು ಹೇಳಿದ್ದುದು ತಮಗೆ ಗೊತ್ತಾಗಲಿಲ್ಲ. ತಾವು ಲೇಟ್ ಬಂದಿದ್ದೀರಿ. ಮೊದಲು ಟೈಮ್‌ನಲ್ಲಿ ಬಂದಿದ್ದರೆ ಗೊತ್ತಾಗುತ್ತಿತ್ತು. ನಾನು ಹೇಳಿದೆ ಮಾನ್ಯ ಬಂಗಾರಪ್ಪನವರು ಮೊದಲು ಆರ್ಡರ್ ಎನ್‌ಕ್ವೈರಿ ಮಾಡಿದ್ದರು. ನಂತರ ತಾವು ಚೀಫ್ ಮಿನಿಸ್ಟರ್ ಆದಿರಿ. ಆ ಎನ್‌ಕ್ವೈರಿ ಕೋಲ್ಡ್ ಸ್ಟೋರೇಜ್‌ಗೆ ಹೋಯಿತು. ಪುನಃ ನಾವು ಇಲ್ಲಿ ಗಲಾಟೆ ಮಾಡಿದಾಗ ತಾವು ಡಿಫೆಂಡ್ ಮಾಡಿದಿರಿ. ಎರಡನೇಯ ಭಾರಿಗೆ ಗಲಾಟೆ ಮಾಡಿದಾಗ ತಾವು ಎನ್‌ಕ್ವೈರಿಗೆ ಆರ್ಡರ್ ಮಾಡಿದಿರಿ ಎಂದು ನಾನು ಹೇಳಿದೆ. ತಾವು ಇದ್ದಿಲ್ಲ, ನಾನು ಸವಿಸ್ತಾರವಾಗಿ ಎಲ್ಲಾ ಬ್ಯಾಕ್‌ಗ್ರೌಂಡ್ ಕೊಡುತ್ತಾ ಬರುತ್ತಿದ್ದೇನೆ. ಹಾಗಾಗಿ ಎನ್‌ಕ್ವೈರಿ ಮಾಡಿದರು. ಇವತ್ತು ಎನ್‌ಕ್ವೈರಿ ರಿಪೋರ್ಟ್ ಬಂದಿದೆ. ಎನ್‌ಕ್ವೈರಿ ರಿಪೋರ್ಟ್ ಗವರ್ನಮೆಂಟ್ ಕಡೆ ಬಂದು ಎಂಟು ದಿವಸ ಆಯಿತು. ಡಿವಿಜನಲ್ ಕಮಿಷನರ್ ಸ್ಪಾಟ್‌ಗೆ ಹೋಗಿದ್ದಾರೆ. ಜನರನ್ನು ಭೇಟಿ ಆಗಿದ್ದಾರೆ ಮತ್ತು ಸ್ಪಷ್ಟವಾದ ರಿಪೋರ್ಟ್ ಕೊಟ್ಟಿದ್ದಾರೆ. ಏನು ರಿಪೋರ್ಟ್ ಕೊಟ್ಟಿದ್ದಾರೆ? ದುರ್ವ್ಯವಹಾರ ಆಗಿದೆ, ಬಡ ಜನರಿಗೆ, ಸ್ಥಳೀಯ ಜನರಿಗೆ ಅಲ್ಲಿ ಸೈಟ್ ಕೊಟ್ಟಿಲ್ಲ, 8400 ರೂಪಾಯಿಗಳ ಒಳಗೆ ಇನ್‌ಕಂ ಇದ್ದ ಜನರಿಗೆ ಸೈಟ್ ಕೊಟ್ಟಿಲ್ಲ. ಅಲ್ಲಿ ಇನ್‌ಕಂ ಸರ್ಟಿಫಿಕೆಟ್ ಇಲ್ಲ. ಇವರು, ನಾವು 700 ಜನರ ಡಮ್, ಡಿಫ್‌ನವರಿಗೆ ಸೈಟ್ ಕೊಟ್ಟಿದ್ದೇವೆಂದು ಹೇಳುತ್ತಾರಲ್ಲ ಇದಕ್ಕೆ ಯಾವುದೇ ಆಧಾರ ಇಲ್ಲ.

ಯಾವ ಸರ್ಟಿಫಿಕೇಟ್ ಸಹ ಇಲ್ಲ ಎಂದು ಡಿವಿಜನಲ್ ಕಮಿಷನರ್ ರಿಪೋರ್ಟ್ ಕೊಟ್ಟು ಸ್ಪಷ್ಟವಾಗಿ ಹೇಳಿದ್ದಾರೆ, ಈ ಸೈಟ್ ಅಲಾಟ್‌ಮೆಂಟ್ ಕ್ಯಾನ್ಸಲ್ ಆಗಬೇಕು ಎಂದು ಹೇಳಿದ್ದಾರೆ. ಈ ಲ್ಯಾಂಡ್ ಏನು ಇದರ ಸಮೀಪ ಇಂಡಸ್ಟ್ರಿಯಲ್ ಎಸ್ಟೇಟ್ ಇದೆ. ಹಾಗಾಗಿ ಕಾಮರ್ಸ್ ಅಂಡ್ ಇಂಡಸ್ಟ್ರೀ ಡಿಪಾರ್ಟ್‌ಮೆಂಟಿನವರು Electronic Processing Zone, Marketing Processing Zoneಗಳಿಗೆ ಲ್ಯಾಂಡ್ ಕೇಳಿದ್ದಾರೆ. ಅದಕ್ಕೆ ಆ ಲ್ಯಾಂಡ್ ಕೊಡಬೇಕು ಎಂದು ಡಿವಿಜನಲ್ ಕಮಿಷನರ್ ರೆಕಮಂಡ್ ಮಾಡಿದ್ದಾರೆ. ಆಶ್ರಯದಲ್ಲಿ ಯಾರು ಅಧ್ಯಕ್ಷರು ಇದ್ದರು ಮಾನ್ಯ ಕೃಷ್ಣಪ್ಪನವರು, ಅವರನ್ನೂ ಇಂಡಕ್ಟ್ ಮಾಡಿದ್ದಾರೆ. ಈ ಸಮಿತಿಯಲ್ಲಿ ಬಿಡಿಓ ಸೆಕ್ರೆಟರಿ ಇರುತ್ತಾರೆ. ಬಿಡಿಓನವರದ್ದು ಏನೂ ನಡೆದಿಲ್ಲ. ಈ ಬ್ಯಾಂಕ್ ಆಶ್ರಯದಲ್ಲಿ ಏನು ಪಟ್ಟ ಫಾರಂ ಇರುತ್ತದೆಯಲ್ಲಾ ಅದರ ಮೇಲೆ ಬಿಡಿಓ ಸೀಲ್ ಸಿಗ್ನೇಚರ್ ಇಟ್ಟುಕೊಂಡು ಮಾನ್ಯ ಸಚಿವರು ಶಾಸಕರಾಗಿದ್ದಾಗ ತನ್ನ ಮನೆಯಲ್ಲಿ ಇದನ್ನು ಇಟ್ಟುಕೊಂಡು ಇದನ್ನು ತಾವು ಫಿಲಪ್ ಮಾಡಿದ್ದಾರೆ. ಯಾರಿಗೆ ಬೇಕೋ ಅವರ ಹೆಸರು ಹಾಕಿದ್ದಾರೆ, ಇವರು ಕೊಟ್ಟಿದ್ದಾರೆ. 1300 ಚಿಲ್ಲರೆ ಸೈಟು ಕೊಟ್ಟಿದ್ದಾರೆ. ಅದರ ಪೈಕಿ ಕೇವಲ 50 ಅಥವಾ 60 ಜನ ಲೋಕಲ್ ಇರಬಹುದು. ಬಾಕಿ ಯಾರೂ ಲೋಕಲ್ ಜನ ಇಲ್ಲ, ಯಾರೂ ಬಡವರು ಇಲ್ಲ. ಬೆಂಗಳೂರಿನಲ್ಲಿ ಆರ್ಥಿಕವಾಗಿ ಸಂಪನ್ನರಾಗಿದ್ದ ಜನರಿಗೆ ಇವರು ಸೈಟ್ ಕೊಟ್ಟಿದ್ದಾರೆ. ಮದ್ರಾಸಿನ ಜನರಿಗೆ ಕೊಟ್ಟಿದ್ದಾರೆ. ಆಂಧ್ರ ಪ್ರದೇಶದಲ್ಲಿದ್ದ ಜನರಿಗೆ ಕೊಟ್ಟಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ಈಗಾಗಲೇ ಇದು ಬಂದಿರಬಹುದು. ನನ್ನ ಹತ್ತಿರ ಲಿಸ್ಟ್ ಇದೆ. 1300 ಜನರಿಗೆ ಸೈಟ್ ಕೊಟ್ಟಿದ್ದಾರೆ. ಈ ಲಿಸ್ಟ್‌ನಲ್ಲಿ ಮಾನ್ಯ ಮುಖ್ಯಮಂತ್ರಿಗಳು ನೋಡಬೇಕು. ಹೆಸರು ಕೃಷ್ಣಪ್ಪ, ಗಂಗಪ್ಪ, ತಾಯಿ ಹೆಸರು ಇಲ್ಲ ತಂದೆ ಹೆಸರು ಪತ್ತೆ ಇಲ್ಲ. ಇದೇನು ಸೈಟ್ ಅಲಾಟ್ ಮಾಡುವ ಪದ್ಧತಿಯೋ ಅಥವಾ ಲೂಟಿ ಮಾಡುವ ಪದ್ಧತಿಯೋ? ಇದು ಬಹಳ ದೊಡ್ಡ ಪ್ರೈಮ್ ಲ್ಯಾಂಡ್. ಈ ಲ್ಯಾಂಡ್‌ನ ಬೆಲೆ ಇವತ್ತಿನ ಮಾರ್ಕೆಟ್ ರೇಟ್‌ಗೆ ಕನಿಷ್ಟ 80 ರಿಂದ ನೂರು ಕೋಟಿ ರೂಪಾಯಿ ಆಗುತ್ತಿದೆ. It is just 15 Kms. from Bangalore City, ವಿಧಾನಸೌಧದಿಂದ. ಈ 70 ಎಕರೆ ಭೂಮಿಯಲ್ಲಿ ಈ ಲೂಟಿ ನಡೆದಿದೆ. ಭ್ರಷ್ಟಾಚಾರ ನಡೆದಿದೆ. ಪ್ರತಿ ಒಬ್ಬರಿಗೂ ಸೈಟ್ ಕೊಡಬೇಕಾದರೆ ತನ್ನ ಮಿತ್ರರಿಗೆ, ಆಪ್ತರಿಗೆ ಹಣ ತೆಗೆದುಕೊಂಡು ಮಾನ್ಯ ಶಾಸಕರು ಇವತ್ತು ಕೊಟ್ಟಿದ್ದಾರೆ. ಹಾಗಾಗಿ ಇಲ್ಲಿ ಬಹಳ ದೊಡ್ಡ ದುರ್ವ್ಯವಹಾರ ನಡೆದಿದೆ. ನಾನು ಮೂರು ಬಾರಿ ಈ ಸದನದಲ್ಲಿ ರೈಸ್ ಮಾಡಿದ್ದೆ. ಅಲ್ಲದೆ ಈಗ ಡಿವಿಜನಲ್ ಕಮೀಷನರ್ ರಿಪೋರ್ಟ್ ಸಹ ಇದೆ.

ಶ್ರೀ ಎಂ. ವೀರಪ್ಪ ಮೊಯಿಲಿ : ತಾವು ಇದರ ಬಗ್ಗೆ ಟೀಕೆ ಮಾಡಿ. ಅದಕ್ಕೆ ಏನೂ ನನ್ನ ಅಡ್ಡಿ ಇಲ್ಲ. ಆದರೆ ಸನ್ಮಾನ್ಯ ಮಂತ್ರಿಗಳ ವಿಚಾರದಲ್ಲಿ, ಹಣ ತೆಗೆದುಕೊಂಡಿದ್ದಾರೆಂದು ಹೇಳಲು, ನೋಟೀಸ್ ಕೊಟ್ಟಿದ್ದೀರೋ? ಇಲ್ಲದಿದ್ದರೆ ಹೇಗೆ ಡೈರೆಕ್ಟ್ ಅಲಿಗೇಷನ್ ಮಾಡಲು ಸಾಧ್ಯ? Has he given a notice?

Sri. R. V. Deshpande : Yes. I am reading,

" Under Rule 311 of Karnataka Legislative Assembly Rules of Procedure and conduct of Business in the Karnataka Legislative Assembly, we request . . . . . the matter with regard to allotment of sites under Ashraya scheme in Hoodi Village in Varthur Assembly Constituency by Sri. A. Krishnappa, MLA, now Hon'ble Minister . . . . . Sri. A. Krishnappa, as the Chairman of the Committee has excercised his authority

and committed fraud in granting the sites. The sites are not allotted to local people. Income factor has not been looked into, lot of corruption had taken place in disposing of 70 acres of valuable prime land is worth Rs. 80 to 90 crores according to market rate. There has been a under-hand dealing in the entire allotment of sites. The matter was raised in the House.

Sri. M. Veerappa Moily : But where is the direct allegation?

(Interruptions)

ಶ್ರೀ ಆರ್. ವಿ. ದೇಶಪಾಂಡೆ : ಫ್ರಾಡ್ ಮಾಡಿದ್ದಾರೆ. ಕರಪ್ಷನ್ ಇದೆ. ಅಂಡರ್‌ಹ್ಯಾಂಡ್ ಡೀಲಿಂಗ್ ಮಾಡಿದ್ದಾರೆಂದು ಹೇಳಿದ್ದೇನೆ

Dr. Jeevaraj Alva : Minister has committed fraud . ಅಂದರೆ, it is an allegation.

Sri. M. Veerappa Moily : Whether that act of corruption was committed by the Minister? That is a crucial question. The rule is very clear. I don't think it can be permitted.

ಶ್ರೀ ಆರ್. ವಿ. ದೇಶಪಾಂಡೆ : ಮಾನ್ಯ ಮುಖ್ಯಮಂತ್ರಿಗಳೇ, ಏಕೆ ಪ್ರೊಟೆಕ್ಷನ್ ಕೊಡುತ್ತಿದ್ದೀರಿ? I have given the notice under rule 311.

Sri. M. Veerappa Moily : It is not specific. It is very general in nature. After having raised the issue generally, you cannot make a personal allegation under the cover of that general notice. I am very sorry, it cannot go on record.

Sri. R.V. Deshpande : Mr. Krishnappa as the Chairman of the Committee has exercised his authority and has committed a fraud in granting the sites. Since sites are not allotted to the local people and also without looking to the income pattern, lot of corruption has taken place in disposing of the valuable prime land, worth Rs. 80-90 crores in the market. There have been under-hand dealings in the entire allotment of sites.

ಶ್ರೀ ಹಾರ್ನಳ್ಳಿ ರಾಮಸ್ವಾಮಿ : ಮಾನ್ಯ ಅಧ್ಯಕ್ಷರೇ, ಇದರ ಬಗ್ಗೆ ಪ್ರಸ್ತಾಪಿಸಲು ಮೊದಲೇ ನೋಟೀಸ್ ಕೊಡಬೇಕೆಂಬ ನಿಯಮವಿದೆ. ಆದರೆ, ಅವರು ಇವೊತ್ತು ಬೆಳಿಗ್ಗೆ ನೋಟೀಸ್ ಕೊಟ್ಟಿದ್ದೀರಿ. The Object of this rule is, unless the member has given previous intimation to the Speaker and also to the Minister concerned, he cannot raise. The minister may be able to make an investigation into the matter for the purpose of reply. So there should sufficient time for the minister concerned. If you want a reply from the Chief Minister, the Chief Minister should have sufficient time in order to make an investigation and then give a reply. Here, you have just now raised and you want the concerned minister to give reply. This is not what is contemplated in Rule 311. There should be sufficient time for conducting investigation into the matter.

Mr. Jeevaraj Alva : The subject arises out of the investigation done by the Divisional Commissioner where there is a clear indictment of the minister, and the Hon'bel Leader of the Opposition says it is a fraud, it is a corruption and it is a under-hand dealing. Fraud could be anything. It could corruption, distortion using of the official position as a Minister, as a Chairman. So whatever you have to reply, you reply later. But the Leader of the Opposition should be allowed to have his say.

ಶ್ರೀ ಎಸ್. ಎಂ. ಕೃಷ್ಣ (ಉಪ ಮುಖ್ಯ ಮಂತ್ರಿಗಳು) : ಮಾನ್ಯ ಅಧ್ಯಕ್ಷರೇ, ಮಾನ್ಯ ವಿರೋಧ ಪಕ್ಷದ ನಾಯಕರು ಮಂತ್ರಿಯವರ ವಿರುದ್ಧವಾಗಿ ಒಂದು ಆಪಾದನೆ ಮಾಡುತ್ತಿದ್ದಾರೆ. 311ನೇ ವಿಧಿ ಬಹಳ ಸ್ಪಷ್ಟವಾಗಿದೆ. ಅದರ ಉದ್ದೇಶವೇನೆಂದರೆ, ಅವರು ಇಂತಹ ವಾದಗ್ರಸ್ತ ವಿಚಾರಗಳ ಬಗ್ಗೆ ಅವರ ಗೌರವಕ್ಕೆ ಧಕ್ಕೆ ಬರತಕ್ಕಂಥ ರೀತಿಯಲ್ಲಿ ಅವರ ವಿಚಾರದಲ್ಲಿ ಏನೇನು ನಮೂದು ಮಾಡಿದರೂ ಕೂಡ ಅವರಿಗೆ ಅದನ್ನು ಡಿಫೆಂಡ್ ಮಾಡಿಕೊಳ್ಳತಕ್ಕಂಥ ಒಂದು ಅವಕಾಶ ಕೊಡಬೇಕೆನ್ನತಕ್ಕಂಥಾದ್ದು ನಿಯಮ 311ರ ಉದ್ದೇಶವಾಗಿದೆ. ಈಗ ಮಾನ್ಯ ಮಂತ್ರಿಗಳು ಸದನದಲ್ಲಿಲ್ಲ, ನೀವು ಇವೊತ್ತು ಬೆಳಿಗ್ಗೆ ನೋಟೀಸ್ ಕೊಟ್ಟಿದ್ದೀರೆಂದು ಹೇಳಿದ್ದೀರಿ ಮತ್ತು ಅವರಿಗೂ ಕೂಡ ನೋಟೀಸ್ ಕಳುಹಿಸಿಕೊಟ್ಟಿದ್ದೇನೆಂದು ತಿಳಿಸಿದ್ದೀರಿ. ಆ ನೋಟೀಸ್ ಅವರಿಗೆ ತಲುಪಿದೆಯೋ ಇಲ್ಲವೋ ಗೊತ್ತಿಲ್ಲ. ಆದುದರಿಂದ, ಮಾನ್ಯ ವಿರೋಧ ಪಕ್ಷದ ನಾಯಕರು ಈ ವಿಧಿಗೆ ಪುರಸ್ಕಾರ ಕೊಟ್ಟು, ಮಾನ್ಯ ಮಂತ್ರಿಗಳಾದ ಶ್ರೀ ಕೃಷ್ಣಪ್ಪನವರು ಬಂದಾಗ ಈ ವಿಚಾರಗಳನ್ನು ಪ್ರಸ್ತಾಪಿಸಿದರೆ ಅವರು ಇದಕ್ಕೆ ತಕ್ಕ ಜವಾಬ್ದಾರಿ ಉತ್ತರ ಕೊಡತಕ್ಕಂಥ ಹೊಣೆಗಾರಿಕೆ ಇದೆ. ಅನಂತರ, ಮಾನ್ಯ ಮುಖ್ಯಮಂತ್ರಿಗಳು ಅಲ್ಪಿಮೇಟಾಗಿ ಇದರ ವಿಚಾರದಲ್ಲಿ ಏನು ಹೇಳಬೇಕೆಂಬುದರ ಬಗ್ಗೆ ಅವರೂ ಸಹ ಕೇಳುತ್ತಾರೆ.

ಶ್ರೀ ಡಿ. ಬಿ. ಚಂದ್ರೇಗೌಡ : ಅವರು ಯಾವಾಗ ಬರುತ್ತಾರೆಂದು ನಮಗೆ ಗೊತ್ತಾಗುವುದು ಹೇಗೆ?

S. M. Krishna : Reasonable time must be given. ಇನ್‌ಡೆಫನೇಟ್ ಆಗಿ ಕಾಯಿರಿ ಎಂದು ನಾನು ಹೇಳುತ್ತಿಲ್ಲ

ಶ್ರೀ ಡಿ. ಬಿ. ಚಂದ್ರೇಗೌಡ : ರೀಸನಬಲ್ ಟೈಂ ಎಂದರೆ ಅದು ತಮಗೆ ಬಿಟ್ಟಿದ್ದುದು.

ಶ್ರೀ ಆರ್. ವಿ. ದೇಶಪಾಂಡೆ : ನಾನು ನಿಮ್ಮ ಅನುಮತಿಯನ್ನು ಪಡೆದುಕೊಂಡೇ ಶೂನ್ಯವೇಳೆಯಲ್ಲಿ ಈ ವಿಷಯವನ್ನು ಪ್ರಸ್ತಾಪ ಮಾಡಿದ್ದುದು. ಆದರ ಜೊತೆಗೆ ನಾನು ಅಲಿಗೇಷನ್ ಮಾಡಬೇಕಾಗುತ್ತದೆ, ಆ ರೀತಿ ಅಲಿಗೇಷನ್ ಮಾಡಬೇಕಾದರೆ ಮಾನ್ಯ ಸದಸ್ಯರುಗಳು ಅಥವಾ ಮುಖ್ಯಮಂತ್ರಿಗಳು ಅಬ್ಜೆಕ್ಷನ್ ಮಾಡಬಹುದು. ಹಾಗಾಗಿ as a safety measure I have also given a notice. ನಾನು ಸೇಫ್ಟಿಯನ್ನು ತೆಗೆದುಕೊಂಡು ತಮಗೆ ನೋಟೀಸನ್ನು ಕೊಟ್ಟಿದ್ದೇನೆ. ಆದ್ದರಿಂದ ನಾನು ಅಲಿಗೇಷನ್ ಮಾಡುವಾಗ ಅವರಿಂದ ಅಬ್ಜೆಕ್ಷನ್ ಬರಬಾರದು ಎಂದು ನೋಟೀಸ್ ಕೊಟ್ಟಿದ್ದೇನೆ. ಅದರಿಂದಾಗಿ ತಾವು ನನಗೆ ಅನುಮತಿಯನ್ನು ಕೊಟ್ಟರಿ ಕೃಷ್ಣಪ್ಪನವರಿಗೆ. Natural Justiceನಲ್ಲಿ he should have every right, to say what is truth. ಡಿ. ಸಿ. ಯವರು ಏನು ವರದಿಯನ್ನು ಕೊಟ್ಟಿದ್ದಾರೆ ಅದನ್ನು ಈ ಸದನದ ಮುಂದೆ ಮುಖ್ಯ ಮಂತ್ರಿಗಳು ಇಟ್ಟುಬಿಡಲಿ, ಏಕೆಂದರೆ ನಮ್ಮ ಪಕ್ಷದವರು ಮತ್ತು ವೈ. ಕೆ. ರಾಮಯ್ಯನವರು ಇದರ ಬಗ್ಗೆ ನೋಟೀಸನ್ನು ಕೊಟ್ಟಿದ್ದೇವೆ. ಇವತ್ತು ನಾನು ಹೇಳುತ್ತಿದ್ದೇನೆ ಈ ಸದನದಲ್ಲಿ ಅದು ಚರ್ಚೆಯಾಗಲಿ, ಇದರ ಬಗ್ಗೆ ವಿಚಾರಣೆಗೆ ಡಿ. ಸಿ. ಯವರನ್ನು ನೇಮಕ ಮಾಡಿದರು. ಅವರಿಂದ ರಿಪೋರ್ಟ್ ಬಂದಿದೆ. ಬಂದ ಆ ವರದಿಯನ್ನು ಈ ಸದನದ ಮುಂದೆ ಇಟ್ಟು ಅದರ ಬಗ್ಗೆ ಕ್ರಮವನ್ನು ತೆಗೆದುಕೊಳ್ಳಲಿ. Mr. Krishnappa's explanation will come afterwards. ನಾನು ಏನು ಚಾರ್ಜ್ ಮಾಡುತ್ತಿದ್ದೇನೆ, that will come afterwards. ಆಶ್ರಯ ಯೋಜನೆಯ ಕಾರ್ಯಕ್ರಮದಲ್ಲಿ ನೈಟುಗಳ ಹಂಚಿಕೆಯಲ್ಲಿ ಅವ್ಯವಹಾರವಾಗಿದೆಯೋ;ಇಲ್ಲವೋ, The Divisional Commissioner's report will speak the truth. ಮೋಸವಾಗಿದೆಯೋ ಅಥವಾ ಇಲ್ಲವೋ ಎಂಬುದು ಆ ವರದಿಯಿಂದ ಗೊತ್ತಾಗುತ್ತದೆ. He has got every right to defend himself and say. That right I don't want to take out.

Mr. Speaker : Now we will fix up a time so that the concerned minister will also be here.

ಮಾನ್ಯ ಸದಸ್ಯರು : ನೋಟೀಸನ್ನು ಕೊಟ್ಟಮೇಲೆ ಮುಗಿಯಿತು.

ಶ್ರೀ ಹಾರ್ನಳ್ಳಿ ರಾಮಸ್ವಾಮಿ : ನಾನು ಒಂದು ಮಾತನ್ನು ಹೇಳುವುದೇನೆಂದರೆ, for the purpose of reply, the concerned minister should investigate into the matter himself and then reply.

ಶ್ರೀ ಆರ್. ವಿ. ದೇಶಪಾಂಡೆ : ಇನ್‌ವೆಸ್ಟಿಗೇಷನ್ ಮಾಡುವುದು ಬೇರೆ ವಿಚಾರ, ಆದರೆ 311ರ ಪ್ರಕಾರ,

(ಮುಂದಲ)

ಡಾ ॥ ಜೀವರಾಜ ಆಳ್ವ : ಇದರ ಬಗ್ಗೆ ಇಲ್ಲಿ ಮೂರು ಸಾರಿ ಚರ್ಚೆಯಾಗಿದೆ, ಆ ರೀತಿ ಚರ್ಚೆಯಾದ ನಂತರ ವಿರೋಧ ಪಕ್ಷದ ಒತ್ತಾಯದ ಮೇರೆಗೆ ಮುಖ್ಯಮಂತ್ರಿಗಳು ಆ ಸಮಿತಿಯನ್ನು ರಚನೆ ಮಾಡಿದರು. On the strength of the report submitted, we are making a submission to you as hon. members of the House. Incidently, he is a minister. By virtue of his being a member of the legislature, he is the Chairman of the Task Force and incidentally he is also a minister. The Committee has submitted a report. We have read about it in the paper. Now the leader of the opposition is trying to convince you and trying to elicit a response from the government. ಇದಕ್ಕೆ ಕೃಷ್ಣಪ್ಪನವರು ಇರಬೇಕೆಂದು ನಾವೇನೂ ಬಯಸುತ್ತಿಲ್ಲ. ನಾವು ಏನು ಕೇಳುತ್ತಿದ್ದೇವೆಂದರೆ ಮಾನ್ಯ ಮುಖ್ಯಮಂತ್ರಿಗಳ ಸಚಿವ ಸಂಪುಟದ ಸದಸ್ಯರೊಬ್ಬರು ಇದರಲ್ಲಿ ಶಾಮೀಲಾಗಿದ್ದಾರೆ, Whatever, it is, according to the report, he is an abettor in the crime. Under these circumstances, what is the government going to do? what is the Chief Minister going to do. We are not eliciting a response from Mr. Krishnappa. ನಮಗೆ ಯಾವ ಬೇಡಿಕೆಗಳೂ ಬೇಕಾಗಿಲ್ಲ. ಇದರ ಬಗ್ಗೆ ಪೂರ್ಣವಾಗಿ ಚರ್ಚೆಯಾಗಿದೆ. ಅಲ್ಲಿ ಫೈರಿಂಗ್ ಆಗಿದೆ. ಜಗಳವಾಗಿದೆ, ಪೋಲೀಸ್ ಕೇಸ್ ಆಗಿದೆ. The House is seized of the matter. We have had long deliberation on this 'Ashraya' scandals. It is for the Chief Minister alone to decide, elicit information whether it is true that the report has been submitted. On the strength of the report what is the government going to do about it. Mr. Krishnappa doesnot come into the picture. We are not alleging. We are only saying the report says so. Under these circumstances, what is the Chief Minister going to do?

ಶ್ರೀ ಆರ್. ವಿ. ದೇಶಪಾಂಡೆ : ಮಾನ್ಯ ಕೃಷ್ಣಪ್ಪನವರು ಆ ಸಮಿತಿಯ ಅಧ್ಯಕ್ಷರು ಮತ್ತು ಆ ಭಾಗದ ಎಂ. ಎಲ್. ಎ.

ಶ್ರೀ ಎಂ. ವೀರಪ್ಪ ಮೊಯಿಲಿ : ವಿಷಯ ಬಹಳ ಸ್ಪಷ್ಟವಾಗಿದೆ. ಮಾನ್ಯ ವಿರೋಧಪಕ್ಷದ ನಾಯಕರು ನೋಟೀಸನ್ನು ಕೊಟ್ಟಿರತಕ್ಕದ್ದು. ನಿಯಮ 311ರ ಪ್ರಕಾರ, ತಾವು ನೋಟೀಸನ್ನು ಕೊಟ್ಟಿದ್ದೀರಿ. ಅದರಲ್ಲಿ ಆಪಾದನೆ ಮಾಡಿದ್ದೀರಿ. ಇದರಲ್ಲಿ ಸ್ಪಷ್ಟವಾಗಿದೆ. ಸದಸ್ಯರು, ಅಧ್ಯಕ್ಷರು ಮತ್ತು ಸಂಬಂಧಪಟ್ಟ ಮಂತ್ರಿಗಳಿಗೆ, ಮಂತ್ರಿಗಳು ಉತ್ತರ ನೀಡುವ ಉದ್ದೇಶಕ್ಕಾಗಿ ತನಿಖೆ ನಡೆಸಲು ಸಾಧ್ಯವಾಗುವಂತೆ ಪೂರ್ವ ಮಾಹಿತಿಯನ್ನು ಕೊಡದ ಹೊರತು ಯಾವ ಸದಸ್ಯರೂ ಯಾವ ವ್ಯಕ್ತಿಯ ಕುರಿತು ಅಪಮಾನಕರವಾದ ಅಥವಾ ಅಪರಾಧದ ಆಪಾದನೆ ಮಾಡುವ ಯಾವ ಆರೋಪವನ್ನು ಮಾಡತಕ್ಕದ್ದಲ್ಲ. ಅಲ್ಲದೆ, ಅಧ್ಯಕ್ಷರು ಅಂಥ ಆರೋಪವು ಸದನದ ಮರ್ಯಾದೆಗೆ ಕುಂದುತರುವಂಥಾದ್ದು ಅಥವಾ ಅದರಿಂದ ಯಾವುದೇ ಸಾರ್ವಜನಿಕ ಹಿತಾಸಕ್ತಿ ಸಾಧ್ಯವಾಗುವುದಿಲ್ಲವೆಂದು ಅಭಿಪ್ರಾಯ ಪಡುವುದಿದ್ದರೆ ಯಾವುದೇ ಸಂದರ್ಭದಲ್ಲಿ, ಯಾವುದೇ ಸದಸ್ಯರು ಅಂಥ ಯಾವುದೇ ಆರೋಪವನ್ನುಮಾಡುವುದನ್ನು ನಿಷೇಧಿಸಬಹುದು.

ಅಂದರೆ ಇದರಲ್ಲಿ ಎಲ್ಲಾ ರಿಕ್ವೈರ್‌ಮೆಂಟ್ಸ್ ಇದೆ. ಈಗ ನೋಟೀಸನ್ನು ಹೇಗೆ ಕೊಡುವುದು? ಈ ವಿಷಯದಲ್ಲಿ ಒಂದು ಆಪಾದನೆ ಬಂದಾಗ ಅದರ ಬಗ್ಗೆ ಅವರು ವಿಚಾರಮಾಡಬೇಕು. ಅವರು ಹಣವನ್ನು ತೆಗೆದುಕೊಂಡಿದ್ದಾರೆ, ಅವರು ಕರಪ್‌ಷನ್ ಮಾಡಿದ್ದಾರೆಂದು ತಾವು ಹೇಳಿದ್ದೀರಿ. ಜನರಲ್ ಆಗಿ ತಮ್ಮ ನೋಟೀಸ್ ಇದೆ. That is not properly worded. To be very frank with you, that will not come under 311. It should come under some other form. ಅವರ ವಿಷಯದಲ್ಲಿ ನಿಯಮ 311 ರ ಪ್ರಕಾರ ಕಳುಹಿಸಿದ್ದೀರಿ. ಅದರಲ್ಲಿ ಅನುಮಾನವಿಲ್ಲ. ಆದರೆ, It is an issue which you have already raised on the floor of the House. ಇದರ ಬಗ್ಗೆಯೇ ಹೇಳುವುದಾದರೆ ನಾನು ಈಗ ಉತ್ತರವನ್ನು ಕೊಡಬಹುದು. ಇದು ಕೇವಲ ನನ್ನ ಉತ್ತರಕ್ಕೇ ಸೀಮಿತವಾಗಿಲ್ಲ. ಮಾನ್ಯ ಮಂತ್ರಿಗಳ ಉತ್ತರಕ್ಕೂ ಕೂಡ ಪ್ರಮುಖವಾಗಿ ಸೀಮಿತವಾಗಿದೆ. ಇವತ್ತು ನಾವು ಅವರಿಗೆ ನೋಟೀಸನ್ನು ಏನು ಕೊಟ್ಟಿದ್ದೇವೆ ಅದು ಅವರಿಗೆ ತಲುಪಿದ್ದೆಯೋ ಇಲ್ಲವೋ ಗೊತ್ತಿಲ್ಲ. ಇದರಲ್ಲಿ ನ್ಯಾಚುರಲ್ ಜಸ್ಟೀಸ್ ಇದೆ. ಇದು ಸಜ್ಜನಿಕೆಯ ವಿಚಾರ. ನ್ಯಾಚುರಲ್ ಜಸ್ಟೀಸ್‌ನ ಅನುಭವ ಕೂಡ ಇದರಲ್ಲಿದೆ. ತಮಗೆ ಹೇಳುವುದಾದರೆ, ತಮ್ಮ ವಿಚಾರವನ್ನು ಬೇರೆ ಯಾವ ಮೂನ್ಯ ಸದಸ್ಯರಾದರೂ ಎತ್ತಿದರೆ ಅದನ್ನು ಡಿಫೆಂಡ್ ಮಾಡಿಕೊಳ್ಳುವುದಕ್ಕೆ ಇಲ್ಲಿ ಇರಬೇಕಾಗುತ್ತದೆ. ಮಾನ್ಯ ದೇಶಪಾಂಡೆಯವರು ಅಥವಾ ಡಾ॥ ಜೀವರಾಜ ಆಳ್ವರವರು ಇಲ್ಲಿ ಇಲ್ಲದ ಸಂದರ್ಭದಲ್ಲಿ ಅವರ ಮೇಲೆ ವೈಯುಕ್ತಿಕವಾದ ಆಪಾದನೆಯನ್ನು ಮಾಡಬಾರದೆಂದು ಮಾಡಬೇಕು. ಇಲ್ಲದಿದ್ದರೆ ನಾಳೆ ಅವರ ಮೇಲೆ ಆಪಾದನೆ ಮಾಡಿ ವಿಚಾರ ಪ್ರಸ್ತಾಪ ಮಾಡುವುದಕ್ಕೆ ಅವಕಾಶವಾಗುತ್ತದೆ. ಇವತ್ತು ತಾವು ಈ ವಿಚಾರವನ್ನು ಪ್ರಸ್ತಾಪ ಮಾಡುವುದಕ್ಕೆ ಅವಕಾಶವನ್ನು ಕೊಟ್ಟರೆ ಇನ್ನು ಮುಂದೆ ಯಾರು ಯಾರ ವಿರುದ್ಧ ಯಾವಾಗ ಬೇಕಾದರೂ ಇಲ್ಲಿ ಬಂದು ಆಪಾದನೆ ಮಾಡುವುದಕ್ಕೆ ಅವಕಾಶವಾಗುತ್ತದೆ. ಆದ್ದರಿಂದ ಮಾನ್ಯ ಸದಸ್ಯರಿಗೆ ಕೆಲವು ರಕ್ಷಣೆಗಳನ್ನು ತಾವು ಕೊಡಬೇಕಾಗುತ್ತದೆ. ತಾವು ವಿರೋಧಪಕ್ಷದ ನಾಯಕರಾಗಿದ್ದೀರಿ. ತಮ್ಮ ಸದಸ್ಯರ ಹಕ್ಕನ್ನು ಕಾಪಾಡಿಕೊಳ್ಳುವುದಕ್ಕೆ ತಾವು ಮೊದಲಿಗರಾಗಿರುತ್ತೀರಿ. ಇದರ ಬಗ್ಗೆ ತಾವು ಆಲೋಚನೆ ಮಾಡಬೇಕು. ಏಕೆಂದರೆ ಪ್ರೀವಿಯಸ್ ನೋಟೀಸನ್ನು ಇತರೆ ಸದಸ್ಯರಿಗೆ ಕೊಡಬೇಕಾಗುತ್ತದೆ, ಅದರ ಬಗ್ಗೆ ತನಿಖೆ ಮಾಡಬೇಕಾಗುತ್ತದೆ. ಅದಕ್ಕೆ ಮಂತ್ರಿಗಳು ಉತ್ತರವನ್ನು ಕೊಡಬೇಕಾಗುತ್ತದೆ. ಇಲ್ಲಿ ಕೇವಲ ನನ್ನ ಉತ್ತರಕ್ಕೆ ಮಾತ್ರ ಇದು ಸೀಮಿತವಾಗಿಲ್ಲ. ಹಾಗಿದ್ದಿದ್ದರೆ, ನಾನು ಯೋಚನೆ ಮಾಡುತ್ತಿರಲಿಲ್ಲ. ಹಿಂದು ಮುಂದು ನೋಡುತ್ತಿರಲಿಲ್ಲ. ನಾನು ಯಾವಾಗ ಬೇಕಾದರೂ ಉತ್ತರವನ್ನು ಕೊಡುವುದಕ್ಕೆ ಸಿದ್ಧವಾಗಿದ್ದೇನೆ. ನನಗೆ ಸಮಯ ಬೇಕಾಗಿಲ್ಲ. I am prepared to give reply at any time. The Government will have to be trasparent. Our transparency in the administration, I am going to speak about it. That is a difference matter. ಇದು ಅಲ್ಲಿಗೇ ಸೀಮಿತವಾಗಿಲ್ಲ. ತಾವು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಅವರು ಲಂಚ ತೆಗೆದುಕೊಂಡಿದ್ದಾರೆಂದು ವೈಯುಕ್ತಿಕ ಆಪಾದನೆ ಮಾಡಿದ್ದೀರಿ. ಮಾಲಾಫೈಡಿ ಆಟ್ರಿಬ್ಯೂಟ್ ಮಾಡಿಕೊಂಡು ತಾವು ಹೇಳುತ್ತಿರುವಾಗ ನಾವು ಕೂಡ ಯೋಚನೆ ಮಾಡಬೇಕಾಗುತ್ತದೆ. ನಾನು ನೋಟೀಸನ್ನು ಕೊಟ್ಟಿದ್ದೇನೆ. ಆದ್ದರಿಂದ, ಈ ವಿಷಯವನ್ನು ಪ್ರಸ್ತಾಪ ಮಾಡಬಹುದೆಂದು ತಾವು ಹೇಳಬಹುದು. ಆದರೆ ಆ ನೋಟೀಸ್ ಸಂಬಂಧಪಟ್ಟವರಿಗೆ ಮುಟ್ಟಿದೆಯೋ ಇಲ್ಲವೇ, ಎಂದು ನೋಡಬೇಕಾಗುತ್ತದೆ. ತಾವು ಮಾಡಿರತಕ್ಕ ಆಪಾದನೆಗಳೂ ಕೂಡ ತಮ್ಮ ನೋಟೀಸ್‌ನಲ್ಲಿ ಸ್ಪಷ್ಟವಾಗಿಲ್ಲ. ಆದರೂ ತಾವು ನಿಯಮ 311ರಲ್ಲಿ ನೋಟೀಸನ್ನು ಕೊಟ್ಟಿರುವುದರಿಂದ ಇದರ ವಿಚಾರವನ್ನು ಅವರು ತಿಳಿದುಕೊಂಡು ಉತ್ತರವನ್ನು ತಮಗೆ ಕೊಡಲು ಅವರು ಸ್ವಲ್ಪವಾದರೂ ಸಿದ್ಧತೆ ಮಾಡಿಕೊಳ್ಳಬೇಕಾಗುತ್ತದೆ.

ಯಾರೇ ಆಗಲಿ ಒಂದು ಅಪಾದನೆಯನ್ನು ಮಾಡಿದಾಗ ಅದನ್ನು ಬಹಳ ಸೂಕ್ಷ್ಮವಾಗಿ ಸ್ವೀಕಾರ ಮಾಡಬೇಕಾಗುತ್ತದೆ. ಅವರು ತಮ್ಮನ್ನು ತಾವು ಡಿಫೆಂಡ್ ಮಾಡಿಕೊಳ್ಳಬೇಕಾಗುತ್ತದೆ. ಇಲ್ಲ, ನೀವು ಅವರನ್ನು ಡಿಫೆಂಡ್ ಮಾಡಬೇಕಾಗಿಲ್ಲ. I am going to hang whether you defend or not, ಅಂತ ಹೇಳಿ ತಾವು ಹೇಳುವುದಾದರೆ ಅದು ಸರಿಯಲ್ಲ. ಕಾನೂನು ಮಾಡತಕ್ಕ ನಾವೇ ಯಾರನ್ನು ಬೇಕಾದರೂ ನೇಣು ಹಾಕಬಹುದು. ಇದರ ಬಗ್ಗೆ ವಿಚಾರಣೆಯನ್ನೇ ಮಾಡಬೇಕಾಗಿಲ್ಲ, ಇದರಲ್ಲಿ ನ್ಯಾಚುರಲ್ ಜಸ್ಟೀಸ್ ಏನೂ ಇಲ್ಲ. ಈ ವಿಚಾರ ಈ ಸದನಕ್ಕೆ ಸಂಬಂಧಪಟ್ಟಿಲ್ಲವೆಂದು ತಾವು ಎದ್ದು ನಿಂತು ಮಾತನಾಡುವುದಕ್ಕೆ ಹೊರಟರೆ ಇದು ಎಲ್ಲಿಗೆ ಹೋಗಿ ನಿಲ್ಲುತ್ತದೆಂದು ತಾವು ಯೋಚನೆ ಮಾಡಬೇಕು. ಅಲ್ಲಿ ಇಲ್ಲಿ ಲೋಪದೋಷಗಳು ಆಗಬಹುದು. ಕೂಡಲೇ ಇವರು ಲಂಚವನ್ನು ತೆಗೆದುಕೊಂಡಿದ್ದಾರೆಂದು ನಾಳೆ ನಿಮ್ಮ ಮೇಲೆಯೇ ಅಪಾದನೆ ಬರಬಹುದು. ನನ್ನ ಮೇಲೂ ಕೂಡ ಬರಬಹುದು. ಇದರ ಬಗ್ಗೆ ತಾವು ಬಹಳ ಆಲೋಚನೆ ಮಾಡಬೇಕು. ಮೊನ್ನೆ ಮಾನ್ಯ ಸದಸ್ಯರಾದ ರಾಯರೆಡ್ಡಿಯವರು ಕ್ರಿಮಿನಲ್ ಕೇಸುಗಳ ಬಗ್ಗೆ ಪ್ರಸ್ತಾಪ ಮಾಡಿದಾಗ ನಾನು ಹೇಳಿದೆ. ಕಂಪ್ಲೇಂಟ್ ಕೊಟ್ಟ ಮೇಲೆ ಛಾರ್ಜ್‌ಷೀಟ್ ಹಾಕುತ್ತಾರೆ. ಎಂ.ಎಲ್.ಎ. ಗಳ ಮೇಲೆ ಕಂಪ್ಲೇಂಟ್ ಅನ್ನು ಕೊಟ್ಟಮೇಲೆ ಛಾರ್ಜ್‌ಶೀಟ್ ಅನ್ನು ಹಾಕಬೇಕೆಂದು ಏನಾದರೂ ಕಾನೂನು ಇದೆಯೇ? ಸಿ. ಆರ್. ಪಿ. ಸಿ. ನಲ್ಲಾಗಲಿ, ಇಂಡಿಯನ್ ಪೀನಲ್ ಕೋಡ್‌ನಲ್ಲಾಗಲಿ ಕಾನೂನು ಇದೆಯೇ? ಇದರಿಂದ ಸಾರ್ವಜನಿಕರಲ್ಲಿ ಏನು ಅಭಿಪ್ರಾಯ ಬರುತ್ತದೆ. 'ಬಿ' ಷೀಟ್ ಹಾಕಿದರು. 'ಸಿ' ಷೀಟನ್ನು ಹಾಕಿದರು ಎನ್ನತಕ್ಕ ಅಭಿಪ್ರಾಯ ಸಾರ್ವಜನಿಕರಲ್ಲಿ ಬಂದು ಎಲ್ಲಾ ಎಂ.ಎಲ್.ಎ.ಗಳ ಮೇಲೂ ಗೂಬೆಯನ್ನು ಕೂಡಿಸತಕ್ಕ ಕೆಲಸವಾಗುತ್ತದೆ. Self-inflicting injury on our own self. ನಾವು ಇದರ ಬಗ್ಗೆ ಅಡ್ಡಿ ಬರುವುದಿಲ್ಲ. ತನಿಖೆ ಮಾಡಿದ್ದೇವೆ, ವರದಿ ಇದೆ. ನಾವು ಏನು ಕ್ರಮ ತೆಗೆದುಕೊಳ್ಳುತ್ತೇವೆ ಅದನ್ನೂ ಕೂಡ ಹೇಳುತ್ತೇನೆ. We are not here to suppress anything or hide anything.

11.45 ಎ. ಎಂ.

ನಾನು ಆಗಲೇ ಹೇಳಿದ್ದೇನೆ ಈ ರೀತಿ ತನಿಖೆ ಮಾಡುತ್ತೇವೆಂದು. ಅವರನ್ನು ಪ್ರೊಟೆಕ್ಟ್ ಮಾಡುತ್ತೇವೆಂದು ಹೇಳಲಿಲ್ಲ. ತಾವು ರೆಕಾರ್ಡ್ ತೆಗೆದುನೋಡಿ. ತನಿಖೆ ಮಾಡುವ ಮೊದಲು ನಾವು ಸರಿ ಇದೆ ಎಂದು ಸರ್ಟಿಫಿಕೇಟ್ ಕೊಡಲು ನಾನು ಯಾರು? I am not that foolish enough to give that kind of a Statement. I did say 500. ಜನರು ನನ್ನ ಹತ್ತಿರ ಬಂದು ಕೃಷ್ಣಾದಲ್ಲಿ ಬೇಟಿಯಾದರು. ನಾನು ಭೇಟಿಯಾದೆ ಎಂದು ಅಷ್ಟು ಮಾತ್ರ ವಾಸ್ತವಾಂಶ ಹೇಳಿದನೇ ಹೊರತು ಎಲ್ಲಾ ಸರಿಯಾಗಿದೆ ಎಂದು ನಾನು ಹೇಳಲಿಲ್ಲ. ಈಗ ದಯಮಾಡಿ ಆಶ್ರಯ ಕಮಿಟಿಯ ಎಲ್ಲಾ ಸದಸ್ಯರು ಇದ್ದಾರೆ. ಎಲ್ಲಾ ಸರಿಯಾಗಿದೆ ಗೈಡೆಲೈನ್ಸ್ ಪ್ರಕಾರ ಹೋಗಿದೆ ಎಂದು ಹೇಳಲಿಕ್ಕೆ ಆಗುತ್ತದೆಯೇ, After all, he is the Chairman. It is for the officers to feed him with information ಅಲ್ಲಿ ಏನಾದರೂ ಹೆಚ್ಚು ಕಡಿಮೆಯಾಗಿದ್ದರೆ ಯಾರದ್ದು ತಪ್ಪೆಂದು ಗುರುತಿಸಬೇಕಾದಂಥ ಕರ್ತವ್ಯ ಕೂಡ ಇದೆ. We will have to identify, ಇಲ್ಲದಿದ್ದರೆ, ಯಾರೂ ಮುಂದೆ ಚೇರ್‌ಮನ್ ಆಗಲಿಕ್ಕೆ ಆಗುವುದಿಲ್ಲ. ಯಾವ ಜವಾಬ್ದಾರಿಯನ್ನು ಯಾವ ಶಾಸಕರು ಕೂಡ ತೆಗೆದುಕೊಳ್ಳಲಿಕ್ಕೆ ಆಗುವುದಿಲ್ಲ.

ಶ್ರೀ ಎನ್. ಡಿ. ನಾಯಕ್ : ಸನ್ಮಾನ್ಯ ಅಧ್ಯಕ್ಷರೇ, ಅವರೂ ಕೂಡ ಒಬ್ಬ ಛೇರ್‌ಮನ್ ಆಗಿದ್ದಾರೆ. ಅವರ ಮೇಲೂ ಇವತ್ತು ಚಾರ್ಜ್‌ಷೀಟ್ ಮಾಡಬೇಕಾಗುತ್ತದೆ. ಏತಕ್ಕೆಂದರೆ ಎಂ. ಎಲ್.ಎ.ಗಳ ಪ್ರಶ್ನೆ ಇದೆ. ವಿರೋಧ ಪಕ್ಷದ ನಾಯಕರ ಮೇಲೂ ಚಾರ್ಜ್‌ಷೀಟ್ ಮಾಡಿ.

ಶ್ರೀ ಎಂ. ವೀರಪ್ಪ ಮೊಯಿಲಿ : ಸನ್ಮಾನ್ಯ ಅಧ್ಯಕ್ಷರೇ, ಇದರ ಗಾಂಭೀರ್ಯತೆಯನ್ನು ಅರ್ಥ ಮಾಡಿಕೊಳ್ಳಬೇಕು. ತಾವು ತಮ್ಮ ಚೇಂಬರ್‌ನಲ್ಲಿ ಮಾತನಾಡಿಕೊಳ್ಳುವುದು ಒಳ್ಳೆಯದು. ಏತಕ್ಕೆಂದರೆ, ನಾಳೆ ಏನಾಗುತ್ತದೆ ಗೊತ್ತೆ? Everybody will go against all the MLAs to Lokayukta tomorrow . That is what Mr. Vinaykumar Sorke is facing just because one has submitted his application for Oldage pension, Somebody has appoached the Lokayukta. ನಾಳೆ ನೀವು ಯಾವುದಾದರೂ ರೆಕಮೆಂಡ್ ಮಾಡಲಿಕ್ಕೆ ಆಗುವುದಿಲ್ಲ, If you go strictly by law. ಇವತ್ತು ಆಶ್ರಯ ಕಮಿಟಿಯಲ್ಲಿ ಎಲ್ಲಾ ಇದ್ದಾರೆ. ಎಲ್ಲಾ 100 ಪರ್ಸೆಂಟ್ ಕರೆಕ್ಟ್ ಎಂಬುದನ್ನು How are we to know? The matter is placed before us by the Committee and it is allotted. Let us try to understand the case. If there is irregularity, the government is there. We have the appeal Power, we have the review Power and it is not the final authority. ಅದನ್ನು ನೋಡೋಣ. ಏತಕ್ಕೆಂದರೆ ಗೈಡ್‌ಲೈನ್ಸ್ ಫಾಲೋ ಆಗದಿದ್ದರೆ we will say that guidelines may be followed. We will maintain it.

ನಾಳೆ ಮಾನ್ಯ ದೇಶಪಾಂಡೆಯವರೇ, ಎಲ್ಲರೂ ಕೋರ್ಟಿನ ಕಟಕಟೆಗೆ ಬಿಹೈಂಡ್ ದಿ ಬಾರ್ ಎಲ್ಲರೂ ಹೋಗಬೇಕಾಗುತ್ತದೆ. ಆದ್ದರಿಂದ, ದಯಮಾಡಿ ಸಾರ್ವಜನಿಕ ಜೀವನದಲ್ಲಿ ಕೆಲಸ ಮಾಡುತ್ತಿರುವಾಗ ಕೆಲವು ಅಪ್ಪತಪ್ಪಗಳಾದರೆ ಅದನ್ನು ಡಿಫೆಂಡ್ ಮಾಡುವುದು ಬಹಳ ಕಷ್ಟ. ಆದರೆ ಅದನ್ನು ಸರಿಪಡಿಸಲಿಕ್ಕೆ ಯಾವಾಗಲೂ ಅವಕಾಶ ಇದೆ. ಶಾಸಕರಿಗೆ ಇದೆ, ಅಧ್ಯಕ್ಷರಿಗೆ ಇದೆ, ಸಮಿತಿಯ ಸದಸ್ಯರಿಗೆ ಇದೆ. ಆದ್ದರಿಂದ ದಯವಿಟ್ಟು ಸನ್ಮಾನ್ಯ ಅಧ್ಯಕ್ಷರೇ, ಅಷ್ಟು ಸಲಿಗೆಯಿಂದ ಇದನ್ನು ತೆಗೆದುಕೊಳ್ಳತಕ್ಕಂಥ ವಿಚಾರವಲ್ಲ. ದಿನವೂ ಒಂದೊಂದು ವಿಷಯ ಬರಬಹುದು. ಆಶ್ರಯದಲ್ಲಿ ಪ್ರೊಫೆಸರ್ ನಂಜುಂಡಸ್ವಾಮಿಯವರು ಅಧ್ಯಕ್ಷರಾಗಿದ್ದಾರೋ ಏನೋ ಗೊತ್ತಿಲ್ಲ. ಮಾನ್ಯ ನಂಜುಂಡಸ್ವಾಮಿಯವರಿಗೆ ಯಾರಾದರೂ ಪೊಲಿಟಿಕಲ್ ಎನಮಿಸ್ ಇದ್ದೇ ಇರುತ್ತಾರೆ. Because none of us are elected unanimously in any constituency.

ಶ್ರೀ ಎನ್. ಜಿ. ನಾಯಕ್ : ಮಾನ್ಯ ಅಧ್ಯಕ್ಷರೇ, ಎಲ್ಲಾ ಎಂ.ಎಲ್.ಎ.ಗಳು ಅಧ್ಯಕ್ಷರು. ಅವರೂ ಅಧ್ಯಕ್ಷರಾಗಿದ್ದಾರೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಈಗ ಈ ಪ್ರಶ್ನೆ ಇಲ್ಲಿಗೇ ನಿಲ್ಲುವುದಿಲ್ಲ. ತಮಗೂ ಪೊಲಿಟಿಕಲ್ ರೈವಲ್ಸ್ ಇರುತ್ತಾರೆ. Somebody has contested against you ; this cannot be used as a weapon. ಸಾರ್ವಜನಿಕ ಜೀವನದಲ್ಲಿ ಕೆಲಸ ಮಾಡುವಾಗ ಕೆಲವು ಸೇಫ್‌ಗಾರ್ಡ್ಸ್ ಇರಬೇಕಾಗುತ್ತದೆ. ಆದ್ದರಿಂದ if it cross the limit ಆ ಲಕ್ಷಣರೇಖೆ ಧಾಟಿದರೆ ಒಂದು ವೇಳೆ ಅದರಲ್ಲಿ ಏನಾದರೂ ಮಾಲಾಫಿಡೇಸ್ ಇದ್ದರೆ ತಾವು ಕ್ವೆಶ್ಚನ್ ಎಬ್ಬಿಸಬಹುದು. ಆದ್ದರಿಂದ ದಯಮಾಡಿ ಸನ್ಮಾನ್ಯ ಕೃಷ್ಣಪ್ಪನವರು ಬರಲಿ, ಅವರಿಗೆ ನೀವು ನೋಟೀಸ್ ಕೊಟ್ಟಿರುವುದು ತಲುಪಿದೆಯೋ ಇಲ್ಲವೋ ಗೊತ್ತಿಲ್ಲ; ಅವರೂ ಇನ್‌ವೆಸ್ಟಿಗೇಟ್ ಮಾಡಬೇಕಾಗುತ್ತದೆ. ನಾಳೆ ತೆಗೆದುಕೊಳ್ಳಿ ಈ ವಿಚಾರ. ಸರ್ಕಾರ ಕೂಡ ಇದಕ್ಕೆ ಉತ್ತರವನ್ನು ಕೊಡುತ್ತದೆ.

I am not here to shield anyone if any mistake is committed by anyone, I am here to take action against them.

ಶ್ರೀ ಆರ್. ವಿ. ದೇಶಪಾಂಡೆ : ಮಾನ್ಯ ಅಧ್ಯಕ್ಷರೇ, ಮುಖ್ಯಮಂತ್ರಿಗಳು ಹೇಳಿದ ಒಂದು ವಿಚಾರವನ್ನು ನಾನು ಪ್ರಾಮಾಣಿಕವಾಗಿ ಸ್ಪಷ್ಟವಾಗಿ ಒಪ್ಪಿಕೊಳುತ್ತೇನೆ. ಯಾವ ಸದಸ್ಯರ ಮೇಲೂ ಇಲ್ಲಿ ಬೇಜವಾಬ್ದಾರಿಯುತವಾಗಿ ಆಪಾದನೆ ಮಾಡುವುದಕ್ಕೆ ಬರುವುದಿಲ್ಲ. ಆಶ್ರಯ ಸಮಿತಿಯ ಅಧ್ಯಕ್ಷರು ಎಲ್ಲಾ ಶಾಸಕರು ಎಂಬುದನ್ನು ಒಪ್ಪಿಕೊಳ್ಳುತ್ತೇನೆ. ಆದರೆ ಈ ವಿಷಯ ಏತಕ್ಕೆ ಬಂತು ಎಂದರೆ ಇದು ಪ್ಲೈಂ ಲ್ಯಾಂಡ್. ಈ ವಿಷಯ ಇವತ್ತಿನಿಂದ ನಡೆಯುತ್ತಿಲ್ಲ; ನಾಲ್ಕಾರು ತಿಂಗಳುಗಳಿಂದ ನಡೆಯುತ್ತಿದೆ. ಇವತ್ತು ನಾನು ರೈಸ್ ಮಾಡಿದ ವಿಷಯ ಏನೆಂದರೆ, ಇವತ್ತಿನ ದಿವಸ ಹಳ್ಳಿಯಲ್ಲಿ 30-40 ಅಡಿ ಅಳತೆಯ ನಿವೇಶನ ಕೇಳಿದರೆ, ಯಾರೂ ಕೊಡುವುದಿಲ್ಲ. ಆಶ್ರಯ ಯೋಜನೆಯಲ್ಲಿ ಕೊಡುವ ವಿಚಾರದಲ್ಲಿ ಹೆಚ್ಚು ಕಡಿಮೆ ಆಗಬಹುದು ; ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಅದರ ಬಗ್ಗೆ ನಾನು ರೈಸ್ ಮಾಡುತ್ತಿಲ್ಲ. ನನಗೆ ಅದರ ಅವಶ್ಯಕತೆಯೂ ಇಲ್ಲ. ಏಕೆಂದರೆ ಆಶ್ರಯ ಯೋಜನೆಯಲ್ಲಿ ಎಲ್ಲಾ ಹಳ್ಳಿಗಳಲ್ಲಿ ಸೈಟು ಕೊಡುವಾಗ ನೂರಕ್ಕೆ ನೂರು ಸರಿಯಾಗಿ ಕೊಟ್ಟಿದ್ದಾರೆಂದು ಹೇಳುವುದಿಲ್ಲ. ಅದು ಸ್ವಲ್ಪ ತಪ್ಪಾಗಿರಬಹುದು. ಆದರೆ ಇಲ್ಲಿ ಬೇರೆ ವಿಚಾರ ಇದೆ. ಅಲ್ಲಿ 6 ತಿಂಗಳಿಂದ ಜನ ಅಜಿಟೇಷನ್ ಮಾಡುತ್ತಿದ್ದಾರೆ. ಇದು ಪ್ಲೈಂ ಲ್ಯಾಂಡ್ ಇದೆ. ಬಡ ಪರಿಶಿಷ್ಟ ಜನಾಂಗದವರು ಕಲ್ಪಿವೇಟ್ ಮಾಡುತ್ತಿದ್ದ ಲ್ಯಾಂಡ್ ಅದು. ಅವರಿಗೆ ಬಗರ್‌ಹುಕುಂ ಸಾಗುವಳಿಯಲ್ಲಿ ಮಾಡುವುದಕ್ಕೆ ಬರುವುದಿಲ್ಲವೆಂದು ಹೇಳಿ ಇಂಡಸ್ಟ್ರಿ ಡಿಪಾರ್ಟ್‌ಮೆಂಟ್‌ಗೆ ಕೊಡಬೇಕೆಂದು ಹೇಳಿದ ಲ್ಯಾಂಡ್ ಬೆಂಗಳೂರಿನಿಂದ 15 ಕಿಲೋಮೀಟರ್ ದೂರದಲ್ಲಿದೆ. ಈ ಲ್ಯಾಂಡ್ ಅವರಿಗೆ ಅಲಾಟ್ ಆಗಿದೆ. ಮಾನ್ಯ ಕೃಷ್ಣಪ್ಪನವರ ಮೇಲೆ ಗೂಬೆ ಕೂರಿಸಬೇಕೆಂದು ನಾನು ನಿಂತಿಲ್ಲ. ಆದರೆ ಇವತ್ತು ಇದರಿಂದ ಬಹಳ ಅಫೆಕ್ಟ್ ಆಗುತ್ತದೆ. ಅವರು ಅದನ್ನು ಡಿನೈ ಮಾಡುತ್ತಾ ಬಂದಿದ್ದಾರೆ. ಒಂದು ಕಡೆ ಡಿವಿಜನಲ್ ಕಮಿಷನರ್ ರಿಪೋರ್ಟ್ ಬಂದಿದೆ. ಸೈಟನ್ನು ಜೆನ್ಯುಯನ್ ಜನರಿಗೆ ಕೊಟ್ಟಿಲ್ಲ. ಲೋಕಲ್ ಜನರಿಗೆ ಕೊಟ್ಟಿಲ್ಲ. ಆದ್ದರಿಂದ ಸೈಟ್ ಕ್ಯಾನ್ಸಲ್ ಮಾಡಬೇಕೆಂದು ಡಿವಿಜನಲ್ ಕಮಿಷನರ್ ರಿಪೋರ್ಟ್ ಇದೆ. ಆ ಆಧಾರದ ಮೇಲೆ ನಾನು ಹೇಳುತ್ತಿದ್ದೇನೆಯೇ ಹೊರತು ಕೃಷ್ಣಪ್ಪನವರ ಮೇಲೆ ಆರೋಪ ಮಾಡಬೇಕೆಂದು ಅಲ್ಲ. ನಾನು ರೈಸ್ ಮಾಡಿದ್ದು ಜೀರೋ ಅವರ್‌ನಲ್ಲಿ. ನನಗೆ ಬೇಕಾದ ಉತ್ತರ ಮುಖ್ಯ ಮಂತ್ರಿಗಳ ಕಡೆಯಿಂದ. ರಿಪೋರ್ಟ್ ಬಂತೋ ಇಲ್ಲವೋ? ರಿಪೋರ್ಟ್ ಬಂದರೆ ಆ ರಿಪೋರ್ಟಿನ ಕಂಟೆಂಟ್ಸ್ ಏನು? ನೀವು ಏನು ಕ್ರಮ ತೆಗೆದುಕೊಳ್ಳುತ್ತೀರಿ? ಕೃಷ್ಣಪ್ಪನವರಿಗೆ ಬೇಕಾದರೆ ಅಲಾಯಿದ ಟೈಂ ಕೊಡಿ. ಅವರು ಸ್ಪಷ್ಟೀಕರಣ ನೀಡಲಿಕ್ಕೆ ಟೈಂ ಕೊಡಬೇಕಾಗುತ್ತದೆ. ಆದರೆ ಇವತ್ತು ಮುಖ್ಯಮಂತ್ರಿಗಳಿಗೆ ಹೇಳುತ್ತಿದ್ದೇನೆ, ಯಾರದೋ ತೇಜೋವಧೆ ಮಾಡುವ ಕಾರ್ಯಕ್ರಮವನ್ನು ನಾನು ಮಾಡುತ್ತಿಲ್ಲ. ಮಾಡುವ ಇಚ್ಛೆಯು ನನಗಿಲ್ಲ. ಮಾಡುವುದಕ್ಕೆ ಹೋದರೆ ಅದಕ್ಕೆ ಲಿಮಿಟ್ ಇಲ್ಲ. ಆಶ್ರಯ ಯೋಜನೆಯಲ್ಲಿ ಶಾಸಕರು ನಿವೇಶನ ಕೊಡುವಾಗ ಅಲ್ಲಿ ಇಲ್ಲಿ ಹಳ್ಳಿಯಲ್ಲಿ ಆಗಿರಬಹುದು. ಆದರೆ ಇವತ್ತು ಈ ಲ್ಯಾಂಡ್, ಪ್ಲೈಂ ಲ್ಯಾಂಡ್. ಅದು ಇರತಕ್ಕದ್ದು ಬೆಂಗಳೂರಿಗೆ ಹತ್ತಿರದಲ್ಲಿ. ಅದು ಹರಿಜನ ಗಿರಿಜನರಿಂದ ಕಲ್ಪಿವೇಟ್ ಆಗುತ್ತಿತ್ತು. ಅವರನ್ನು ಎವಿಕ್ಟ್ ಮಾಡಿ, ಆ ಲ್ಯಾಂಡ್ ಇಂಡಸ್ಟ್ರಿ ಡಿಪಾರ್ಟ್‌ಮೆಂಟ್‌ಗೆ ಅಲಾಟ್ ಆಗಿದೆ. ಹಾಗಾಗಿ ಕಾಂಪ್ಲಿಕೇಷನ್ ಇದೆ. ಪ್ರೊ. ನಂಜುಂಡಸ್ವಾಮಿಯವರು ಧಾರವಾಡ ಕ್ಷೇತ್ರದ ಬಗ್ಗೆ ಹೇಳಿದರು; ಅಲ್ಲಿ ಒಂದು ಹಳ್ಳಿಯಲ್ಲಿ ಸೈಟು ಕೊಟ್ಟರೆ ನೂರು ರೂಪಾಯಿ ಕೂಡ ಬೆಲೆ ಇರುವುದಿಲ್ಲವೆಂದು. ಅದನ್ನು ನಾನು ರೈಸ್ ಮಾಡುವುದಕ್ಕೆ ಹೋಗಲಿಲ್ಲ. ಬಡವರಿಗೆ ಬೇಕಾದರೆ ಬ್ಲೈಂಡ್ ಆಗಿ ಕೊಡಿ. ಆದರೆ ಇವತ್ತು ಅದು ಪ್ಲೈಂ ಲ್ಯಾಂಡ್ ಇದೆ. ಹಾಗಾಗಿ ನಾನು ಮುಖ್ಯಮಂತ್ರಿಗಳನ್ನು ಕೇಳುತ್ತಿದ್ದೇನೆ. ಆ ವರದಿಯನ್ನು ಸದನದ ಮುಂದೆ ಇಡಿ ; ಅದರ ಮೇಲೆ ಕ್ರಮ ತೆಗೆದುಕೊಳ್ಳಿ.

ಶ್ರೀ ಎಂ. ವೀರಪ್ಪ ಮೊಯಿಲಿ : ಶ್ರೀಮಂತರಿಗೆ ಪ್ರೈಂ ಲ್ಯಾಂಡ್ ಕೊಡಬೇಕು, ಬಡವರಿಗೆ ಕೊಡಬಾರದೆಂದು ಏನು ಲೆಕ್ಕಾಚಾರ ಇದೆಯೇ?

ಶ್ರೀ ಆರ್. ವಿ. ದೇಶಪಾಂಡೆ : ಇಲ್ಲ. Can there be a prime land in a village ?

(ಗೊಂದಲ)

2-3 ನೂರು ರೂಪಾಯಿಗಳಿಗೆ ಒಂದು ಗುಂಟೆ ಜಾಗವನ್ನು ಯಾರೂ ಕೊಡುವುದಿಲ್ಲ. ನಾನು ಏನು ಕೇಳುತ್ತಿದ್ದೇನೆಂದರೆ ಪ್ರೈಂಲ್ಯಾಂಡ್ ಬಡವರಿಗೆ ಕೊಟ್ಟಿದ್ದರೆ ಒಪ್ಪಿಕೊಳ್ಳುತ್ತಿದ್ದೆ. ಲೋಕಲ್ ಜನರಿಗೆ ಕೊಟ್ಟಿದ್ದರೆ ಒಪ್ಪಿಕೊಳ್ಳುತ್ತಿದ್ದೆ. ಲೋಕಲ್ ಜನರಿಗೆ ಇಲ್ಲ, ಬಡವರಿಗೆ ಇಲ್ಲ, ಎಸ್.ಸಿ. ಎಸ್.ಟಿ.ಯವರಿಗೆ ಇಲ್ಲ. ಆಂಧ್ರ, ತಮಿಳ್ನಾಡು, ಬೆಂಗಳೂರು ಜನರಿಗೆ ಕೊಟ್ಟಿದ್ದಾರೆ. ಅದು ನನ್ನ ಆಪಾದನೆ.

ಅಧ್ಯಕ್ಷರು : ಆ ಪ್ರಸ್ತಾಪನೆಯನ್ನು ಇಲ್ಲಿಗೆ ಬಿಟ್ಟು ಬಿಡಿ. ಪುನಃ ಸಮಯ ಕೊಡುತ್ತೇನೆ, ಆಗ ಪ್ರಸ್ತಾಪ ಮಾಡಿ. ಈಗ ಮುಕ್ತಾಯಗೊಳಿಸಿ.

ಶ್ರೀ ಆರ್. ವಿ. ದೇಶಪಾಂಡೆ : ನಾನು ತಮ್ಮಲ್ಲಿ ಏನು ಕೇಳಿಕೊಳ್ಳುತ್ತಿದ್ದೇನೆಂದರೆ, ಇವತ್ತು ಅಥವಾ ನಾಳೆ ಚರ್ಚೆ ಮಾಡೋಣ. ನಿಮ್ಮ ಕಡೆಯಿಂದ ನನಗೆ ರಿಪೋರ್ಟ್ ಬೇಕಾಗಿದೆ. ನಾನು ಕೃಷ್ಣಪ್ಪನವರನ್ನು ಮಿನಿಸ್ಟರ್‌ಷಿಪ್‌ನಿಂದ ಸೈನ್ ಮಾಡಿ ಎಂದು ಹೇಳುತ್ತಿದ್ದೇನೆ, ಅಲಾಟ್‌ಮೆಂಟ್‌ನ್ನು ಕ್ಯಾನ್ಸಲ್ ಮಾಡಿ ಎಂದು ಹೇಳುತ್ತಿದ್ದೇನೆ, ಮತ್ತು ಇದರ ಬಗ್ಗೆ ಸಿಒಡಿ ಎನ್‌ಕ್ವೈರಿ ಮಾಡಿ ಎಂದು ಹೇಳುತ್ತಿದ್ದೇನೆ. ಪೋಲೀಸ್ ಅಧಿಕಾರಿಗಳಾದ ಶ್ರೀ ಕೆಂಪಯ್ಯ, ಡಿ.ಸಿ.ಪಿ. ಏನಿದ್ದಾರೆ ಅವರು ಏನು ಪ್ರೊಟೆಕ್ಷನ್ ಕೊಡುತ್ತಿದ್ದಾರೆ, ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕು. ಎಸ್.ಸಿ.ಎಸ್.ಟಿ. ಜನರ ವಿರುದ್ಧ ಏನು ಕೇಸು ಫೈಲ್ ಮಾಡಿದ್ದಾರೆ; 6 ತಿಂಗಳಿಂದ ಏನು ಅವರು ಅಜಿಟೇಷನ್ ಮಾಡುತ್ತಿದ್ದಾರೆ, ಆ ಕೇಸನ್ನು ವಿತ್‌ಡ್ರಾ ಮಾಡಬೇಕು. ತಾವು ಇದಕ್ಕೆ ಇವತ್ತು ಅಥವಾ ನಾಳೆ ಟೈಂ ನಿಗದಿ ಮಾಡಬೇಕು. ಕೃಷ್ಣಪ್ಪನವರಿಗೆ ಸ್ಟೇಟ್‌ಮೆಂಟ್ ಮಾಡುವುದಕ್ಕೆ ಪರ್ಮಿಷನ್ ಕೊಡಿ, ಅದಕ್ಕೆ ನಮ್ಮ ಆಕ್ಷೇಪಣೆ ಏನೂ ಇಲ್ಲ. ಮುಖ್ಯ ಮಂತ್ರಿಗಳು ಇದರ ಬಗ್ಗೆ ಅವರ ಸ್ಪಷ್ಟೀಕರಣ ನೀಡಬೇಕು. ಮುಖ್ಯ ಉದ್ದೇಶ ನಾನು ಏನು ಹೇಳಿದ್ದೇನೆ ಅದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ಒತ್ತಾಯಿಸುತ್ತೇನೆ.

* ಡಾ॥ ಜೀವರಾಜ ಆಳ್ವ : ಮುಖ್ಯ ಮಂತ್ರಿಗಳು ಪ್ರೈಂ ಲ್ಯಾಂಡನ್ನು ಬಡವರಿಗೆ ಕೊಡಬಾರದೇನು ಎನ್ನುವ ಮಾತನ್ನು ಹೇಳಿದರು. ಪ್ರೈಂ ಲ್ಯಾಂಡ್ ಕೊಡಿ. ಸಾಧ್ಯವಿದ್ದರೆ, ವಿಧಾನಸೌಧದ ಪಕ್ಕದಲ್ಲಿ ಜಾಗ ಇದ್ದರೆ ಅತ್ಯಂತ ಕಡುಬಡವರಿಗೆ ಕೊಡಿ. ಆದರೆ ಇಲ್ಲಿ ಪ್ರಶ್ನೆ ಏನೆಂದರೆ, ಬೆಂಗಳೂರು ನಗರದ ಸುತ್ತಮುತ್ತ ನಾವು ಕೆಲವರು ಶಾಸಕರು ಇದ್ದೇವೆ. ನಾನು ಅತ್ಯಂತ ಜವಾಬ್ದಾರಿಯುತವಾಗಿ ಮಾತನಾಡುತ್ತಿದ್ದೇನೆ. ವರ್ತೂರು ಇರಬಹುದು, ಹೊಸಕೋಟೆ ಇರಬಹುದು, ಆನೇಕಲ್ ಇರಬಹುದು, ಉತ್ತರಹಳ್ಳಿ ಇರಬಹುದು. ಇದು ಬಹಳ ಮುಖ್ಯ ಪ್ರಶ್ನೆ, ರಾಜ್ಯದ ಪ್ರಶ್ನೆ.

ಶ್ರೀ ಎನ್. ಜಿ. ನಾಯಕ್ : ಅವರು ಜವಾಬ್ದಾರಿ ಶಾಸಕರಿದ್ದಾರೆ. ಸೈಟ್ ಬಗ್ಗೆ ಅವರು ಹೇಳುತ್ತಿದ್ದಾರೆ. ನನಗೆ ಒಂದು ನಿಮಿಷ ಅವಕಾಶ ಕೊಡಿ.

ಡಾ॥ ಜೀವರಾಜ ಆಳ್ವ : ನಾಯಕರೇ, ದಯವಿಟ್ಟು ಒಂದು ನಿಮಿಷ ಕೇಳಿ. ನಾಯಕರ ಕ್ಷೇತ್ರದಲ್ಲಿ 10 ಸಾವಿರ ಸೈಟು ಕೊಟ್ಟರೆ ನಮಗೆ ಸಂತೋಷ. ಆದರೆ ಮಾನ್ಯ ಮುಖ್ಯಮಂತ್ರಿಗಳ ಹತ್ತಿರ ಮನವಿ ಏನೆಂದರೆ . . . .

ಅಧ್ಯಕ್ಷರು : ನಾಳೆ ತಾವು ಈ ಬಗ್ಗೆ ಅವಕಾಶ ಕೊಟ್ಟಮೇಲೆ ಮಾತನಾಡಿ.

ಡಾ॥ ಜೀವರಾಜ ಆಳ್ವ : ವರ್ತೂರು ಬಗ್ಗೆ ನಾನು ಮಾತನಾಡುತ್ತಿಲ್ಲ. ಏಕೆಂದರೆ, ಮಾನ್ಯ ಮುಖ್ಯಮಂತ್ರಿಗಳು ಅತ್ಯಂತ ಕಟುವಾದ ನಿರ್ಧಾರವನ್ನು ತೆಗೆದುಕೊಳ್ಳಬೇಕಾಗುತ್ತದೆ. ಟಾಸ್ಕ್ ಫೋರ್ಸ್ ಕಮಿಟಿ ಛೇರ್ಮನ್ ಆಗಿ ಹೇಳುತ್ತಿದ್ದೇನೆ. ಈ ಬೆಂಗಳೂರು ನಗರದ ಸುತ್ತಮುತ್ತ ಅದು ಶಾಸಕರಿಂದ ಆಗುತ್ತದೆಯೇ, ಅಧಿಕಾರಿಗಳಿಂದ ಆಗುತ್ತದೆಯೋ ಗೊತ್ತಿಲ್ಲ. ಇವತ್ತು ಮಿಡಲ್‌ಮೆನ್, ಟೌಟ್ಸ್ ಎಲ್ಲಾ ಸೇರಿಕೊಂಡು ದರೋಡೆ ಮಾಡುತ್ತಿದ್ದಾರೆ. ಮೋಸ ಮಾಡುತ್ತಿದ್ದಾರೆ. ಆದುದರಿಂದ, ಬೆಂಗಳೂರು ಸುತ್ತಮುತ್ತ ಇರುವ ಆಶ್ರಯ ಸ್ಕೀಮ್ ಸ್ಥಗಿತ ಮಾಡಿ. ಏಕೆಂದರೆ ಕರ್ನಾಟಕದ ಇತರ ಜಾಗಕ್ಕೂ ಇಲ್ಲಿಗೂ ವ್ಯತ್ಯಾಸ ಇದೆ. ಉತ್ತರಹಳ್ಳಿ ಇರಲಿ, ಆನೇಕಲ್ ಇರಲಿ, ಹೊಸಕೋಟೆ ಇರಲಿ, ಮಲ್ಲೇಶ್ವರಂ ಇರಲಿ, ಎಲ್ಲಾ ಕಡೆ ಅನ್ಯಾಯ ನಡೆಯುತ್ತಿದೆ. ಕೋಟಿಗಟ್ಟಲೆ ಹಣ ಮಿಡಲ್‌ಮನ್‌ಗೆ ಹೋಗುತ್ತಿದೆ. ಇದು ಮುಖ್ಯಮಂತ್ರಿಗಳಿಗೆ ಗೊತ್ತಿದೆ. ಸರ್ಕಾರದ ಮಂತ್ರಿಮಂಡಲದ ಪ್ರತಿಯೊಬ್ಬ ಸದಸ್ಯರಿಗೆ ಗೊತ್ತಿದೆ. ನೀವು ಏನೋ ಒಂದು ಕಾರಣದಿಂದ ನಿರ್ಲಿಪ್ತತೆ ತೋರಿಸಿದರೆ you are also a party to it., ಎಂದು ಹೇಳಬೇಕಾಗುತ್ತದೆ. ಬೆಂಗಳೂರು ಮಟ್ಟಿಗೆ ನೀವು ಶಾಸಕರಿಗೆ ಕೊಡಿ. ಶಾಸಕರಿಗೆ 500 ಸೈಟ್ ಕೊಡಿ. ಇದು ವಿಸ್ತರಣೆಗೊಂಡು 16 ಸಾವಿರ ಸೈಟ್‌ಗಳಲ್ಲಿ ಮಿಡಲ್‌ಮನ್‌ಗಳಿಗೆ, ಏಜೆಂಟರಿಗೆ ಎಷ್ಟು ಹೋಯಿತು. ನಾನು ಮುಖ್ಯಮಂತ್ರಿಗಳಿಗೆ ಪ್ರಾರ್ಥನೆ ಮಾಡುತ್ತೇನೆ. ಇದರಲ್ಲಿ ಪೂರ್ಣ statusquo should be maintained. ಆಮೇಲೆ ಇದರ ಬಗ್ಗೆ ನಾವು ಚರ್ಚೆ ಮಾಡೋಣ.

2) ಏಪ್ರಿಲ್ ಒಂದನೇ ತಾರೀಖಿನಿಂದ ಕನ್ನಡವನ್ನೂ ಆಡಳಿತ ಭಾಷೆಯನ್ನಾಗಿ ಜಾರಿಗೆ ತರಲು ಒತ್ತಾಯ.

* ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ಏಪ್ರಿಲ್ 1ನೇ ತಾರೀಖಿನಿಂದ ನಾವು ಮುಖ್ಯ ಮಂತ್ರಿಗಳ ಗಮನ ಸೆಳೆಯಬೇಕೆಂದು ಬಹಳ ಪ್ರಯತ್ನಪಡುತ್ತಿದ್ದೇವೆ. ಅವರು ಸದನಕ್ಕೆ 5 ನಿಮಿಷ,3 ನಿಮಿಷ, ಚಾರು ಚೂರು ಬಂದು ಹೋಗುತ್ತಿದ್ದಾರೆ. ಏಪ್ರಿಲ್ 1ರಿಂದ ನಾವು ಕನ್ನಡವನ್ನು ಆಡಳಿತ ಭಾಷೆ ಮಾಡಿದ್ದೇವೆ ಎಂದು ಸರ್ಕಾರ ಘೋಷಣೆ ಮಾಡಿ ಎಲ್ಲಾ ಬಾಗಿಲಿನಲ್ಲೂ ಎರಡೆರಡು ಮುದ್ರಿತವಾದಂತ ಚಿತ್ರಗಳನ್ನು ಹಾಕಿದ್ದೀರಿ, ಬಹಳ ಸಂತೋಷ. ಈ 1ನೇ ತಾರೀಖಿನಿಂದ ಏನು ಯೋಜನೆ ಮಾಡಿದ್ದೀರಿ, ಈ ಒಂದು ವರ್ಷದಲ್ಲಿ ನೀವು ಏನೇನು ಕಾರ್ಯಕ್ರಮ ಕೈಗೊಳ್ಳುತ್ತೀರಿ? ಸುಮ್ಮನೇ ಒಂದೇ ಲೈನ್ ಹೇಳಿದಿರಿ. ನಾವು ಬಾಗಿಲಲ್ಲಿ ಬರುವಾಗ ಏಪ್ರಿಲ್ 1ನೇ ತಾರೀಖಿನಿಂದ ಕನ್ನಡ ಆಡಳಿತ ಭಾಷೆ ಎಂದು ಹೇಳುತ್ತೀರಿ. ಈ ದಿಸೆಯಲ್ಲಿ ಏನೂ ಆಗಿಲ್ಲದೇ ಇರುವುದರಿಂದ ನಾವು ಹೋಗಿ ನಿಮ್ಮ ನಾಮಫಲಕಕ್ಕೆ ಕಪ್ಪು ಬಳಿಯಬೇಕಾಯಿತು. ಇನ್ನೂ ಅನೇಕ ಫಲಕಗಳು ಉಳಿದಿವೆ. ಇದರ ಬಗ್ಗೆ ಸರ್ಕಾರದ ನಿರ್ಧಾರ ಏನು? ಸರ್ಕಾರ ಯಾವ ಯಾವ ಯೋಜನೆಗಳನ್ನು ಹಾಕಿದೆಯೆಂದು ಹೇಳಬೇಕು. ಏಕೆಂದರೆ ಅದು ಇಲ್ಲ ಎಂದರೆ ಅದಕ್ಕೆ ಅರ್ಥ ಬರುವುದಿಲ್ಲ. ಸುಮ್ಮನೆ ಏಪ್ರಿಲ್ 1ರಿಂದ ಕನ್ನಡ ಎಂದು ಹೇಳುವುದು ಬರೀ ಘೋಷಣೆ ಆಗುತ್ತದೆಯೇ ಹೊರತು ಕಾರ್ಯಕ್ರಮದಲ್ಲಿ ಸರ್ಕಾರದ ನಿರ್ಧಾರ ಏನು ಎಂದು ಹೇಳಿಲ್ಲ. ಇದು ಬಾರದೇ ಇದ್ದರೆ ನೀವು ಏನೂ ನಿರ್ಧಾರ ಮಾಡಿಕೊಳ್ಳದೇ ಬರೀ ಘೋಷಣೆಯಲ್ಲಿ ಹೇಳುವುದಾದರೆ ಶಕ್ತಿ ಬರುವುದಿಲ್ಲ.

ಮತ್ತು ಇದರಿಂದ ಜನರಲ್ಲಿ ನಂಬಿಕೆ ಹೋಗುತ್ತದೆ. ಕನ್ನಡದ ಬಗ್ಗೆ ಕಾಳಜಿ ಇಟ್ಟುಕೊಂಡಿರುವವರು ನೀವು, ನಿಮ್ಮ ಬಗ್ಗೆ ನೇರವಾಗಿ ಕೇಳುತ್ತಿದ್ದೇವೆ. ನಿಮ್ಮ ಸರ್ಕಾರದ ನೇರವಾದ ಕಾರ್ಯಕ್ರಮ ಏನು? ಇವರು 250 ಕನ್ನಡ ಬೆರಳಚ್ಚು ಯಂತ್ರಗಳನ್ನು ಕೊಂಡುಕೊಳ್ಳುವುದಕ್ಕೆ ಟೆಂಡರ್ ಕರೆದಿದ್ದಾರೆ. ನನ್ನ ಪ್ರಕಾರ ತಕ್ಷಣಕ್ಕೆ ಬೇಕಾಗಿರತಕ್ಕ ಬೆರಳಚ್ಚು ಯಂತ್ರಗಳು 2500. ಮತ್ತೆ ತಾವು ಹೇಳುತ್ತಿದ್ದೀರಿ. ಒಂದನೇ ತಾರೀಖಿನಿಂದ ನಮ್ಮ ಟಿಪ್ಪಣಿ ಬರತಕ್ಕದ್ದು. ಕಡತ, ಮಂತ್ರಿಗಳ ಸಹಿ ಎಲ್ಲಾ ಕನ್ನಡದಲ್ಲಿ ಎಂದು ಹೇಳುತ್ತಿದ್ದೀರಿ. ನಾವು ಸ್ವಲ್ಪ ಸುತ್ತಾಡಿ ನೋಡಿದ್ದೇವೆ. ಅದು ಎನೂ ಕಾಣಲಿಲ್ಲ. ನಾವು, ಬಾಬಗೌಡರು ಮತ್ತು ನಂಜುಂಡಸ್ವಾಮಿಯವರು ಒಂದು ತೀರ್ಮಾನ ಮಾಡಿದ್ದೇವೆ. ತಾವು ಸ್ಪಷ್ಟವಾಗಿ ಕನ್ನಡವನ್ನು ಜಾರಿಗೆ ತರತಕ್ಕ ಕಾರ್ಯಕ್ರಮವನ್ನು ಈ ಸದನದಲ್ಲಿ ಹೇಳಲಿಲ್ಲ ಎಂದರೆ ಈ ಕಾರ್ಯಕ್ರಮವನ್ನು ನಾವೇ ಕೈಗೊಳ್ಳುತ್ತೇವೆ. ಆದುದರಿಂದ ನಾವು ಕೈಗೊಂಡರೆ ನಿಮಗೆ ಸಂತೋಷವಾಗುತ್ತದೆ. ನೀವು ಹೇಳತಕ್ಕ ಆದೇಶಗಳನ್ನು ನಾವು ಪಾಲನೆ ಮಾಡುತ್ತಿದ್ದೇವೆ. ತಾವು ಏನೇನು ಕಾರ್ಯಕ್ರಮ ತೆಗೆದುಕೊಂಡಿದ್ದೀರಿ ಎಂದು ಸ್ಪಷ್ಟವಾಗಿ, ಸ್ಥೂಲವಾಗಿ ಸಮಗ್ರ ನೀತಿಯನ್ನು ತಾವು ಹೇಳಬೇಕು.

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಯವರು) : ಮಾನ್ಯ ಅಧ್ಯಕ್ಷರೇ, ಮಾನ್ಯ ವಾಟಾಳ್ ನಾಗರಾಜ್ ಅವರು ಹೇಳುವಂತಹದ್ದು ಸರಿ. ಏಕೆಂದರೆ, ಇದರ ಬಗ್ಗೆ ಹೇಳಿಕೆ ಕೊಡಬೇಕೆಂದು ಹೇಳಿದ್ದೀರಿ. 8ನೇ ತಾರೀಖಿಗೆ ನಾನು ಇದರ ಬಗ್ಗೆ ಸಮಗ್ರವಾದ ನಮ್ಮದು ನೀತಿ ಏಪ್ರಿಲ್ 1ನೇ ತಾರೀಖಿನಿಂದ ಏನಿದೆ ಎಂಬುದನ್ನು ಘೋಷಿಸುವವನಿದ್ದೇನೆ. ನಾವು ಎರಡು ಹಂತದ ಕಾರ್ಯಕ್ರಮವನ್ನು ಘೋಷಣೆ ಮಾಡಿದ್ದೇವೆ. ಏಪ್ರಿಲ್ 1ನೇ ತಾರೀಖಿನಿಂದ ಕೆಲವು ಕಾರ್ಯಕ್ರಮ. ಅದನ್ನು ನಾವು ಅನುಷ್ಠಾನ ಮಾಡುತ್ತಿದ್ದೇವೆ. ಜೂನ್ 1ನೇ ತಾರೀಖಿನಿಂದ ಎರಡನೆಯ ಹಂತದ ಕಾರ್ಯಕ್ರಮ ಕನ್ನಡದ ಅನುಷ್ಠಾನದ ಬಗ್ಗೆ ನಾವು ಕೊಟ್ಟಿದ್ದೇವೆ. ಇದರ ಬಗ್ಗೆ ಸಂಪೂರ್ಣವಾದ ವಿವರ ಎಷ್ಟು ಜಾರಿ ಮಾಡಿದ್ದೇವೆ, ಯಾವ ರೀತಿಯಲ್ಲಿ ಜಾರಿ ಮಾಡಿದ್ದೇವೆ ಎನ್ನುವ ಬಗ್ಗೆ ಒಂದು ಸಂಪೂರ್ಣವಾದ ಹೇಳಿಕೆಯನ್ನು 8ನೇ ತಾರೀಖಿಗೆ ನಾನು ಕೊಡುತ್ತೇನೆ.

3) ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರು ತಾಲ್ಲೂಕಿನಲ್ಲಿ ಸುರಕ್ಷಿತ ಅರಣ್ಯಕ್ಕೆ ಬೆಂಕಿ.

* ಶ್ರೀ ವಿನಯಕುಮಾರ್ ಸೊರಕೆ : ಮಾನ್ಯಅಧ್ಯಕ್ಷರೆ, ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರು ತಾಲ್ಲೂಕಿನ ಸುರಕ್ಷಿತ ಅರಣ್ಯಕ್ಕೆ ಬೆಂಕಿ ಬಿದ್ದು ಸಂಪೂರ್ಣ ಕಾಡು ಸುಟ್ಟು ಹೋಗುವಂತಹ ಪರಿಸ್ಥಿತಿ ಅಲ್ಲಿ ನಡೆಯುತ್ತಿದೆ. ಕಳೆದ ಐದಾರು ದಿವಸಗಳಿಂದ ಕಾಡಿಗೆ ಬೆಂಕಿ ಬಿದ್ದು ಒಂದು ಮರಕ್ಕಿಂತಲೂ ಎತ್ತರವಾಗಿ ದಟ್ಟವಾಗಿ ಬೆಂಕಿ ಹಬ್ಬಿಕೊಂಡು ಇದ್ದಂತಹ ಕಾಡು ಸಂಪೂರ್ಣ ನಾಶವಾಗುವ ಪರಿಸ್ಥಿತಿಯನ್ನು ನಾವು ಕಾಣುತ್ತಿದ್ದೇವೆ. ಕಳೆದ ಮುರ್ನಾಲ್ಕು ವರ್ಷಗಳ ಹಿಂದೆಯೂ ಕೂಡ ಸಂಬಂಧಪಟ್ಟ ಅರಣ್ಯ ಇಲಾಖೆಯವರ ಅಜಾಗರೂಕತೆಯಿಂದ ಅದೇ ರೀತಿಯ ಅನಾಹುತ ನಡೆಯುತ್ತಾ ಇತ್ತು. ಆನಂತರ ಈ ಇಲಾಖೆಯ ವತಿಯಿಂದ ಫೈರ್‌ಮಾರ್ಕ್ ಮಾಡುವಂತಹದ್ದು ಇದಕ್ಕೆ ಪ್ರತಿವರ್ಷ ಕೂಡ ತಾವು ದುಡ್ಡು ಇಡುತ್ತೀರಿ. ಫೈರ್‌ಮಾರ್ಕ್ ಮಾಡಲಿಕ್ಕೆ ಅರಣ್ಯವನ್ನು ಬೆಂಕಿಯಿಂದ ರಕ್ಷಣೆ ಮಾಡಲಿಕ್ಕೆ ಹಣ ಇಟ್ಟರೂ ಕೂಡ ಈ ಸಲ ಪುನಃ ಅರಣ್ಯ ಹತ್ತಿಕೊಂಡು ಉರಿಯುವಂತಹ ವ್ಯವಸ್ಥೆಯನ್ನು ನಾವು ಕಾಣುತ್ತಿದ್ದೇವೆ. ನರ್ಸರಿಗೆ ಸೋಶಿಯಲ್ ಫಾರೆಸ್ಟ್‌ಗೆ ಕೋಟ್ಯಾಂತರ ರೂಪಾಯಿ ಖರ್ಚು ಮಾಡುತ್ತೀರಿ. ಇದ್ದಂತಹ ಕಾಡನ್ನು ರಕ್ಷಣೆ ಮಾಡಲಿಕ್ಕೆ ಯಾವರೀತಿಯ ಕಾರ್ಯಕ್ರಮವಿದೆ? ಐದಾರು ದಿವಸಗಳಿಂದ ಬೆಂಕಿ ಹತ್ತಿಕೊಂಡು ಉರಿಯುತ್ತಿದ್ದರೂ ಕೂಡ ತಮ್ಮ ಇಲಾಖೆಯವರು ಏನು ಮಾಡುತ್ತಿದ್ದಾರೆ? ವರ್ಗಾವಣೆಯ ವಿಚಾರದಲ್ಲಿ ಇದ್ದಾರೆಯೇ?